## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ


بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

**ವರ್ಷ: 05**

**ಸಂಚಿಕೆ: 33**

**ವಾರ್ಷಿಕ ಶುಲ್ಕ ರೂ.600/-**

**ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.**

**15 ಆಗಸ್ಟ್ 2024, 15 ಝುಹೂರ್ 1403 ಹಿಜರಿ ಶಮ್ಸಿ, 09 ಸಫರ್ 1445 ಹಿಜರಿ ಖಮರಿ.**


## ಅಲ್ಲಾಹನ ಉಪದೇಶ

وَاَقِمِ الصَّلٰوةَ طَرَفَيِ النَّهَارِ وَزُلَفًا مِّنَ الَّيْلِ ؕ اِنَّ الْحَسَنٰتِ يُذْهِبْنَ السَّيِّاٰتِ ؕ ذٰلِكَ ذِكْرٰى لِلذّٰكِرِيْنَ

**(ಸೂರಃ ಹೂದ್ : 115)**

**ಅಂದರೆ: ಹಗಲಿನ ಎರಡು ಅಂಶಗಳಲ್ಲೂ ರಾತ್ರಿಯ ವೇಳೆಗಳಲ್ಲೂ ನಮಾಝನ್ನು ನಿರ್ವಹಿಸಿರಿ. ಖಂಡಿತವಾಗಿಯೂ ಸತ್ಕರ್ಮಗಳು ದುಷ್ಕರ್ಮಗಳನ್ನು ಹೋಗಲಾಡಿಸುವುವು. ಇದು ನೆನಪಿಟ್ಟುಕೊಳ್ಳುವವರಿಗೆ ಒಂದು ಬೋಧನೆಯಾಗಿದೆ.**

## ಪ್ರವಾದಿ ಮುಹಮ್ಮದ್(ಸ) ರವರ ಉಪದೇಶ

### ಮೃದುವಾಗಿ ವಿನಂತಿಸಲು

**(2391)** ಹಝ್ರತ್ ಹುಝೈಫ(ರ) ವರದಿ ಮಾಡುತ್ತಾರೆ ನಾನು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರಿಂದ ಹೀಗೆ ಕೇಳಿದೆ. ಅವರು(ಸ) ಹೇಳುತ್ತಿದ್ದರು: ಒಬ್ಬ ವ್ಯಕ್ತಿ ಮರಣ ಹೊಂದಿದನು ಮತ್ತು ಆತನನ್ನು ನೀನು ಏನು ಮಾಡುತ್ತಿದ್ದೆ? ಎಂದು ಕೇಳಲಾಯಿತು. ಅದಕ್ಕೆ ಆತನು ಉತ್ತರಿಸಿದನು: ನಾನು ಜನರೊಂದಿಗೆ ವ್ಯಾಪಾರ ಮಾಡುತ್ತಿದ್ದೆ ಮತ್ತು ಶ್ರೀಮಂತರಿಗೆ ವಿಶ್ರಾಂತಿ ನೀಡುತ್ತಿದ್ದೆ ಮತ್ತು ನಿರ್ಗತಿಕರನ್ನು ಕ್ಷಮಿಸುತ್ತಿದ್ದೆ, ಆದ್ದರಿಂದ ಅವನು ಕ್ಷಮಿಸಲ್ಪಟ್ಟನು.

ಹಝ್ರತ್ ಅಬು ಮಸ್‌ಊದ್(ರ) ಹೇಳಿದರು: ನಾನು ಸಹ ಪ್ರವಾದಿ(ಸ) ಅವರಿಂದ ಇದನ್ನು (ಹದೀಸ್) ಕೇಳಿದೆ.

### ಒಳ್ಳೆಯ ಜನರು ತಮ್ಮ ಸಾಲವನ್ನು ಉತ್ತಮ ರೀತಿಯಲ್ಲಿ ಪಾವತಿಸುತ್ತಾರೆ

**(2392)** ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ ಒಬ್ಬ ವ್ಯಕ್ತಿ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ಬಳಿಗೆ ಬಂದು ಒಂಟೆಯನ್ನು ಕೇಳಿದನು. ರಸೂಲುಲ್ಲಾಹ್(ಸ) ಹೇಳಿದರು: ಆತನನ್ನು ನೀಡಿರಿ. ಅದಕ್ಕೆ ಸಹಾರವರು ಹೇಳಿದರು: ನಮಗೆ ಆತನ ಒಂಟೆಯ ವಯಸ್ಸಿನಿಂದ ಹಿರಿಯಾರ ವಯಸ್ಸಿನ ಒಂಟೆ ಕಾಣುತ್ತಿವೆ. ಅದಕ್ಕೆ ಆ ವ್ಯಕ್ತಿ ಹೇಳಿದನು: ನೀವು(ಸ) ನನಗೆ ಉತ್ತಮವಾಗಿಯೇ ನೀಡಿರೀ. ಅದಕ್ಕೆ ರಸೂಲುಲ್ಲಾಹ್(ಸ) ರವರು ಹೇಳಿದರು: ಅವನಿಗೆ (ಅದೇ ಒಂಟೆಯನ್ನು) ನೀಡಿರಿ, ಏಕೆಂದರೆ ಒಳ್ಳೆಯ ಜನರು ತಮ್ಮ ಸಾಲವನ್ನು ಉತ್ತಮ ರೀತಿಯಲ್ಲಿ ಪಾವತಿಸುತ್ತಾರೆ.

**(ಸಾಹೀಹ್ ಬುಖಾರಿ, ಸಂಪುಟ-4, ಕಿತಾಬ್ ಅಲ್-ಇಸ್ತಿಕ್ರಾತ್, 2008 ಖಾದಿಯಾನ್ ಪ್ರಕಟಿತ)**

ನನ್ನನ್ನು ಸ್ವರ್ಗೀಯ (ದೈವಿಕ ಪುರುಷ) ಎಂದು ನಂಬಿ, ಆಗ ಮುಸ್ಲಿಮರ ನಡುವೆ ಇರುವ ಎಲ್ಲಾ ಜಗಳಗಳು ಮತ್ತು ಎಲ್ಲಾ ಘರ್ಷಣೆಗಳು ಒಂದೇ ಬಾರಿಗೆ ಪರಿಹರಿಸಬಹುದು.
ನನ್ನ ಬಳಿ ಬಂದರೆ ಸತ್ಯವನ್ನು ಕಾಣಬಹುದು, ನೈಜವಾಗಿ ಪಶ್ಚಾತ್ತಾಪಪಟ್ಟು ಸತ್ಯವಿಶ್ವಾಸಿಗಳಾಗಿರಿ, ಯಾವ ಇಮಾಮರ ನಿರೀಕ್ಷೆಯಲ್ಲಿ ನೀವು ಇದ್ದೀರಿ ಅದು ನಾನಾಗಿದ್ದೇನೆ, ಅದರ ಸಾಕ್ಷ್ಯ ಬೇಕಾದರೆ ನನ್ನಿಂದ ಪಡೆಯಿರಿ.

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ನನ್ನ ಸ್ಥಿತಿ ಸಮಾನ್ಯ ಮೌಲವಿಯಂತಿಲ್ಲ, ಬದಲಿಗೆ ನನ್ನ ಸ್ಥಾನವು ಪ್ರವಾದಿಗಳ ಸ್ಥಾನವಾಗಿದೆ. ನನ್ನನ್ನು ಸ್ವರ್ಗೀಯ (ದೈವಿಕ ಪುರುಷ) ಎಂದು ಪರಿಗಣಿಸಿ. ಆಗ ಮುಸ್ಲಿಮರ ನಡುವೆ ಇರುವ ಎಲ್ಲಾ ಜಗಳಗಳು ಮತ್ತು ಎಲ್ಲಾ ಘರ್ಷಣೆಳು ಒಂದೇ ಬಾರಿಗೆ ಇತ್ಯರ್ಥವಾಗಬಹುದು. ಅವನು ಅಲ್ಲಾಹನಿಂದ ತೀರ್ಪುಗಾರನಾಗಿ, ನ್ಯಾಯಾಧೀಶನಾಗಿ ನೇಮಿಸಿರುವನು. ಅವರು ಅರ್ಥೈಸುವ ಪವಿತ್ರ ಖುರ್‌ಆನ್‌ನ ಅರ್ಥವು ಯಾವಾಗಲೂ ಸರಿಯಾಗಿರುತ್ತದೆ ಮತ್ತು ಅವರು ಸರಿ ಎಂದು ಘೋಷಿಸುವ ಹದೀಸ್ ಸರಿಯಾದ ಹದೀಸ್ ಆಗಿರುತ್ತದೆ. ಇಲ್ಲವಾದರೆ ಇವತ್ತಿನವರೆಗೂ ಶಿಯಾ-ಸುನ್ನಿಗಳ ವಿವಾದಗಳು ಯಾವಾಗ ಬಗೆಹರಿಯುತ್ತವೆಯೋ ನೋಡಿ...... ನಾನು ಹೇಳುವುದೇನೆಂದರೆ ಅವರು ಎಲ್ಲಿಯವರೆಗೆ ತಮ್ಮ ರೀತಿ ನೀತಿಯನ್ನು ಬಿಟ್ಟು ನನ್ನ ಪೈಕಿ ವಿಚಾರಿಸುವುದಿಲ್ಲವೋ ಅಲ್ಲಿಯವರೆಗೆ ಸತ್ಯವನ್ನು ಪಡೆಯುವುದು ಅಸಾಧ್ಯ. ಈ ಜನರಿಗೆ ಬೇರೇನೂ ನಂಬಲಿಕ್ಕಾಗಲಿಲ್ಲ ಎಂದರೆ, ಕನಿಷ್ಠ ಒಂದು ದಿನ ಸಾಯಬೇಕಾಗಿ ಎಂದಾದರೂ ನಂಬಿ, ಸತ್ತ ನಂತರವಂತೂ ಸುಳ್ಳಿನಿಂದ ಮುಕ್ತಿ ಪಡೆಯಲು ಸಾಧ್ಯವಾಗುವುದಿಲ್ಲ. ಹಿಂಸೆ ಮತ್ತು ಘರ್ಷಣೆ ಸಜ್ಜನ ವ್ಯಕ್ತಿಯೊಬ್ಬನ ದೃಷ್ಟಿಯಲ್ಲಿ ಒಳ್ಳೆಯದಲ್ಲ ಎಂದಾದರೆ, ಆಗ ಪವಿತ್ರ ದೇವರ ಸನ್ನಿಧಿಯಲ್ಲಿ ಆರಾಧನೆ ಯಾವಾಗ ಸಾಧ್ಯ? ಆದ್ದರಿಂದ ನಾನು ಹೇಳುವುದು, ನನ್ನ ಬಳಿಗೆ ಬನ್ನಿರಿ, ನನ್ನ ಮಾತುಗಳನ್ನು ಆಲಿಸಿರಿ, ಆಗ ನಿಮಗೆ ಸತ್ಯ ಅರಿವಾದೀತು. ನಾನು ಸಂಪೂರ್ಣ ಬದಲಾವಣೆಯನ್ನು ಬಯಸುತ್ತೇನೆ. ನಿಜವಾದ ಪಶ್ಚಾತ್ತಾಪ ಪಟ್ಟು ಸತ್ಯವಿಶ್ವಾಸಿಗಳಾಗಿರಿ, ಯಾವ ಇಮಾಮರ ನಿರೀಕ್ಷೆಯಲ್ಲಿ ನೀವು ಇದ್ದೀರಿ, ಅದು ನಾನಾಗಿದ್ದೇನೆ, ಅದರ ಸತ್ಯತೆ ಅರಿಯಬಯಸುವಿರಾದರೆ ನನ್ನಿಂದ ಸಾಕ್ಷ್ಯವನ್ನು ಪಡೆಯಿರಿ. ಆದ್ದರಿಂದ ಆ ಅಸಂವಿಧಾನಿಕ ಖಲೀಫನನ್ನು ನಾನು ಗೌರವದಿಂದ ಕಾಣಲಿಲ್ಲ. ಅಂತಹ ಕೊಳಕು ಪ್ರಶ್ನೆಯೊಂದಿಗೆ ನಾನು ಏನು ಮಾಡಬೇಕು? ಅವರಿಂದ ಈ ಕೊಳಕುಗಳನ್ನು ತೆಗೆದುಹಾಕುವ ಉದ್ದೇಶದಿಂದ ಅಲ್ಲಾಹನು ನನಗೆ ಕಳುಹಿಸಿರುವನು.

ನೋಡಿರಿ!! ಸುನ್ನಿಗಳು ತಮ್ಮ ಹದೀಸ್‌ಗಳನ್ನು ಅಮಾನ್ಯಗೊಳಿಸುತ್ತಾರೆ. ಅವರು ತಮ್ಮ ಹದೀಸುಗಳನ್ನು ಮಹಾತ್ಮರುಗಳಿಂದ ವರದಿಯಾಗಿದ್ದಾಗಿದೆ ಎಂದು ಹೇಳುತ್ತಾರೆ. ಈ ಎಲ್ಲಾ ವಿವಾದಗಳು ನಿರರ್ಥಕವೆಂದು ನಾವು ಹೇಳುತ್ತೇವೆ. ಈಗ ಸತ್ತ ವಸ್ತುಗಳನ್ನು ಬಿಟ್ಟು ಜೀವಂತ ಇಮಾಮ್ ಅನ್ನು ಗುರುತಿಸಿ ಇದರಿಂದ ನೀವು ಜೀವನದ ಚೈತನ್ಯವನ್ನು ಪಡೆಯಬಹುದು. ನೀವು ದೇವರನ್ನು ಹುಡುಕುತ್ತಿದ್ದರೆ, ದೇವರಿಂದ ಕಳುಹಿಸಲ್ಪಟ್ಟವರನ್ನು ಹುಡುಕಿರಿ. ಒಬ್ಬ ವ್ಯಕ್ತಿಯು ದುರುದ್ದೇಶವನ್ನು ಬಿಡದಿದ್ದರೆ, ನಾವು ಕುರುಡರಾಗಿದ್ದೇವೆಯೇ? ಕಪಟವಿಶ್ವಾಸಿಯನ್ನು ನಾವು ಬಲ್ಲದಿರುವೆಯೇ? ನಾವು ಈ ಮನುಷ್ಯನ ಗುಣವನ್ನು ಬಲ್ಲೆವು ಆದ್ದರಿಂದ ನೆನಪಿಡಿರಿ! ನಾನು ಹೇಳುವ ಈ ಮಾರ್ಗವನ್ನು ದೇವರು ಆರಿಸಿಕೊಂಡ ಮಾರ್ಗವಾಗಿದೆ, ಅವನು ತೋರಿದ ಮಾರ್ಗವೇ ಇದಾಗಿದೆ. ನೋಡಿರಿ, ರೈಲಿನಂತಹ ಆರಾಮದಾಯಕ ಸವಾರಿಯನ್ನು ಬಿಟ್ಟು ಒಂದು ಕುಂಟ ದುರ್ಬಲ ಹೆಸರಗತ್ತೆಯ ಮೇಲೆ ಸವಾರಿ ಸವಾರಿಮಾಡುವವನು ತನ್ನ ಗುರಿಯನ್ನು ತಲುಪಲು ಸಾಧ್ಯವೇ. ಅಯ್ಯೋ, ಈ ಜನರು ದೇವರ ಮಾತುಗಳನ್ನು ಬಿಟ್ಟು ಝೈದ್ ಮತ್ತು ಬಕರ್‌ನ ಮಾತುಗಳನ್ನು ಅನುಸರಿಸುತ್ತಾರೆ. ಅವರನ್ನು ಕೇಳಿ. ಆ ಹದೀಸುಗಳನ್ನು ನೀಡಿದವರು ಯಾರು?

ಹೊಸ ಮುಸಲ್ಮಾನರಾಗುವುದೇ ನಮ್ಮ ದಾರಿ ಎಂದು ನಾನು ಮತ್ತೆ ಮತ್ತೆ ಹೇಳುತ್ತೇನೆ. ಆಗ ಅಲ್ಲಾಹನು ನಿಜವಾದ ಸತ್ಯವನ್ನು ಬಹಿರಂಗಪಡಿಸಿದ್ದಾನೆ. ನಾನು ನಿಜವಾಗಿ ಹೇಳುತ್ತೇನೆ. ಅವರು ತುಂಬಾ ಪ್ರೀತಿಸುವಂತೆ ನಟಿಸುವ ಇಮಾಮುಗಳು ಜೀವಂತವಾಗಿದ್ದರೆ, ಅವರಿಗೆ ತೀವ್ರ ಅಸಹ್ಯವನ್ನು ತೋರಿಸುವರು.

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

"ಈ ಯುದ್ಧದ ಕಾರಣವನ್ನು ವಿವರಿಸುತ್ತಾ, ಹದೀಸ್‌ನ ನಿರೂಪಕರು ಹಾಗೂ ಜೀವನಚರಿತ್ರೆಯ ಲೇಖಕರು ವಿಭಿನ್ನ ಕಾರಣಗಳನ್ನು ನೀಡುತ್ತಾರೆ ಮತ್ತು ಈ ಭಿನ್ನಾಭಿಪ್ರಾಯದಿಂದಾಗಿ, ಈ ಯುದ್ಧದ ಸಮಯದ ಬಗ್ಗೆಯು ಭಿನ್ನಾಭಿಪ್ರಾಯ ಉಂಟಾಗಿದೆ." (ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್)

ಹಝ್ರತ್ ಪೈಗಂಬರ್(ಸ) ಅವರು ಹೊರಡುವ ಸೂಚನೆಯನ್ನು ನೀಡಿದಾಗ ಅವರು ತಮ್ಮ ಭಾಷಣದಲ್ಲಿ ನಾವು ಅವಿಶ್ವಾಸಿಗಳ ಚೆಲೆಂಜನ್ನು ಸ್ವೀಕರಿಸಿ ಈ ಸಂದರ್ಭದಲ್ಲಿ ಹೊರಡುತ್ತೇವೆ ಎಂಬ ವಾಗ್ದಾನ ಮಾಡಿದ್ದೇವೆ ಆದ್ದರಿಂದ ನಾವು ಅದನ್ನು ಉಲ್ಲಂಘಿಸಲು ಸಾಧ್ಯವಿಲ್ಲ ಮತ್ತು ನಾನು ಒಬ್ಬಂಟಿಯಾಗಿ ಹೋಗಬೇಕಾದರೂ, ನಾನು ಏಕಾಂಗಿಯಾಗಿ ಹೋಗಿ ಶತ್ರುಗಳನ್ನು ಎದುರಿಸುತ್ತೇನೆ ಎಂದಿ ಹೇಳಿದಾಗ ಅಲ್ಲಿ ಉಪಸ್ಥಿತರಿದ್ದ ಜನರ ಭಯವು ಮತ್ತು ಆತಂಕವು ಮಾಯವಾಯಿತು ಮತ್ತು ಅವರು ಉತ್ಸಾಹ ಮತ್ತು ಪ್ರಾಮಾಣಿಕತೆಯಿಂದ ನಿಮ್ಮೊಂದಿಗೆ ಹೊರಡಲು ಸಿದ್ಧರಾದರು.

ಮುಸ್ಲಿಮರು ಹಝ್ರತ್ ಪೈಗಂಬರ್(ಸ)ರ ದೃಢತೆ, ಧೈರ್ಯ ಮತ್ತು ದೃಢಸಂಕಲ್ಪ ಕಂಡಾಗ, ಭಯ ಮತ್ತು ಭೀತಿಯ ಸ್ಥಿತಿ ಕೊನೆಗೊಂಡಿತು ಮತ್ತು ಅವರು ಉತ್ಸಾಹದಿಂದ ತಯಾರಿ ಪ್ರಾರಂಭಿಸಿದರು.

**ಬದ್ರುಲ್ ಮೌಊದ್ ಯುದ್ಧ ಹಾಗೂ ದುಮತುಲ್ ಜುಂದಲ್ ಯುದ್ಧಗಳ ಕಾರಣಗಳು ಹಾಗೂ ಘಟನೆಗಳ ವಿವರಾತ್ಮಕ ಪ್ರಸ್ತಾವನೆ**

ಹಝ್ರತ್ ಪೈಗಂಬರ್(ಸ) ಅವರು ನಮ್ಮ ನಡುವಿನ ಕದನ ವಿರಾಮ ಒಪ್ಪಂದವು ಯಾವುದೇ ಹೇಡಿತನ ಮತ್ತು ದೌರ್ಬಲ್ಯವನ್ನು ಆಧರಿಸಿಲ್ಲ ಎಂದು ಈ ಗೋತ್ರದವರಿಗೆ ಯುಕ್ತಿ ಮತ್ತು ಧೈರ್ಯದಿಂದ ಸ್ಪಷ್ಟಪಡಿಸಿದರು, ಹೀಗಾಗಿ ಉಹುದ್ ಯುದ್ಧದ ನಂತರ, ಮುಸ್ಲಿಮರನ್ನು ದುರ್ಬಲರೆಂದು ಪರಿಗಣಿಸಿದ ವಿವಿಧ ಗೋತ್ರದವರು ಅವರ ಮೇಲೆ ದಾಳಿ ಮಾಡಲು ಯೋಜಿಸಿದರು ಮತ್ತು ಬಹಳ ಯುಕ್ತಿಯೊಂದಿಗೆ ಮತ್ತು ಯಶಸ್ಸಿನೊಂದಿಗೆ, ಹಝ್ರತ್ ಪೈಗಂಬರ್(ಸ) ಅವರು ಮುಸ್ಲಿಮರ ಶಕ್ತಿ ಮತ್ತು ಧೈರ್ಯದ ಭಾವನೆಗಳನ್ನು ಪುನಃಸ್ಥಾಪಿಸಿದರು.

"ಈ ಯುದ್ಧವು ಮೊದಲ ಯುದ್ಧವಾಗಿದ್ದು, ಅದರ ಉದ್ದೇಶ ಅಥವಾ ಕನಿಷ್ಠ ಮುಖ್ಯ ಉದ್ದೇಶವು ದೇಶದಲ್ಲಿ ಶಾಂತಿ ಸ್ಥಾಪಿಸುವುದಾಗಿತ್ತು." (ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ))

ವಿಶ್ವಶಾಂತಿಗಾಗಿ ದುಆವಿನ ಕೋರಿಕೆ

ಮುಸ್ಲಿಮರಿಗೆ ತಮ್ಮ ರಕ್ಷಣೆಯ ಏರ್ಪಾಡು ಮಾಡಬೇಕಾಗುವುದು. ಒಂದು ಒಗ್ಗಟ್ಟು ಉಂಟುಮಾಡಬೇಕಾಗುವುದು. ತಮ್ಮ ಸ್ಥಿತಿಗಳನ್ನು ಉತ್ತಮ ಗೊಳಿಸಬೇಕಾಗುವುದು. ಮುಸ್ಲಿಮರು ಇದನ್ನು ಅರಿಯುವಂತೆ ಅಲ್ಲಾಹನು ಮಾಡಲಿ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **05-07-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಇಂದು ನಾನು ಎರಡು ಯುದ್ಧಗಳ ಬಗ್ಗೆ ಪ್ರಸ್ತಾಪಿಸುತ್ತೇನೆ. ಮೊದಲ ಯುದ್ಧ ಹಿಜರೀ 4ರಲ್ಲಿ ನಡೆದ ಗ್ರಝ್ವ ಬದ್ರುಲ್ ಮೌಇದ್ ಆಗಿದೆ. ಈ ಯುದ್ಧವನ್ನು ಬದ್ರುಲ್ ಸಾನಿಯ ಮತ್ತು ಬದ್ರುಸ್ಸುಗ್ರ್ ಎಂದೂ ಕರೆಯಲಾಗುತ್ತದೆ. (ಅರ್ರಹೀಖ್ ಅಲ್‌ಮಖ್ತೂಮ್, ಪುಟ-312-313, ಮಕ್ತಬತುರ್ರುಶದ್ 2000)

ಈ ಯುದ್ಧದ ತಿಂಗಳಿನ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಇಬ್ನೆ ಹಿಶಮ್ ಮತ್ತು ಇಬ್ನೆ ಇಸ್‌ಹಾಖ್‌ರವರು ಹಝ್ರತ್ ಪೈಗಂಬರ್(ಸ) ಹಿಜರೀ 4, ಶಾಬಾನ್ ತಿಂಗಳಲ್ಲಿ ಬದ್ರಿನ ಕಡೆಗೆ ಹೊರಟರು. (ಅಸ್ಸಿರತುನ್ನಬವೀಯ ಲಿಇಬ್ನೆ ಹಿಶಾಮ್, ಪುಟ-618, ದಆರುಲ್ ಕುತುಬ್ ಇಲ್‌ಮಿಯಾ ಬೈರೂತ್ 2001) (ಅಸ್ಸೀರತುನ್ನಬವೀಯಾ ಇಬ್ನೆ ಇಸ್‌ಹಾಖ್, ಪುಟ-391, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 2004)

ವಾಕಿದಿಯ ಪ್ರಕಾರ, ನಾಲ್ಕನೇ ಹಿಜ್ರಿಯಲ್ಲಿ ಧುಲ್-ಖಾಅ್‌ದದ ಚಂದ್ರನು ಗೋಚರಿಸಿದಾಗ ಈ ಯುದ್ಧ ನಡೆಯಿತು ಮತ್ತು 1 ಧುಲ್-ಖಾಅ್‌ದಃದಿಂದ 8 ಧುಲ್-ಖಅ್‌ದಃದವರೆಗೆ ಬದ್ರ್‌ನಲ್ಲಿ ಮಾರುಕಟ್ಟೆ ಇತ್ತು. (ಕಿತಾಬುಲ್-ಮಗ್ಝಾಝಿ ಅಲ್-ವಕ್ದಿ, ಸಂಪುಟ-1, ಪುಟ-324, 325, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್)

ಒಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ಶವ್ವಾಲ್ ತಿಂಗಳಲ್ಲಿ ಬದರ್ ಕಡೆಗೆ ಹೊರಟರು ಅಂದರೆ ಮದೀನಾದಿಂದ ಹೊರಟು ಹಝ್ರತ್ ಪೈಗಂಬರ್(ಸ) ರವರು ಧುಲ್ ಖಾಅ್‌ದಃದ ಚಂದ್ರ ಗೋಚರಿಸಿದ ರಾತ್ರಿಯಲ್ಲಿ ಬದರ್ ಮೈದಾನಲ್ಲಿ ತಲುಪಿದ್ದರು. ಆದಾಗ್ಯೂ, ಈ ಮೂರು ಹೇಳಿಕೆಗಳ ಪ್ರಕಾರ, ಈ ಯುದ್ಧವು ಹಿಜ್ರ 4 ರಲ್ಲಿ ನಡೆಯಿತು. (ಸೀರತುಲ್ ಹಲಬೀಯಾ, ಸಂಪುಟ-2, ಪುಟ-373-374, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 2002)

ಆದಾಗ್ಯೂ, ತಿಂಗಳಲ್ಲಿ ಭಿನ್ನಾಭಿಪ್ರಾಯವಿದೆ. ತಿಂಗಳ ವಿಷಯದಲ್ಲಿ ಕೆಲವು ಚರಿತ್ರೆಗಾರರು ಭಿನ್ನಾಭಿಪ್ರಾಯಗಳನ್ನು ಹೊಂದಿರುವರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಹಿಜರೀ 4ರ ಶವ್ವಾಲ್ ತಿಂಗಳ ಕೊನೆಯಲ್ಲಿ ಹಝ್ರತ್ ಪೈಗಂಬರ್(ಸ) ಒಂದುವರೆ ಸಾವಿರ ಸಹಾಬಿಯರ ಸಂಘದೊಂದಿಗೆ ಮದೀನದಿಂದ ಹೊರಟರು.

(ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಃಇಬ್(ರ) ಎಂ.ಎ, ಪುಟ-529)

ಈ ಯುದ್ಧದ ಕಾರಣವೇನೆಂದರೆ, ಅಬೂಸುಫ್‌ಯಾನ್ ಬಿನ್ ಹರಬ್ ಉಹುದ್ ಯುದ್ಧದಿಂದ ಮರಳುವಾಗ ಹೀಗೆ ಹೇಳಿದನು: ಮುಂದಿನ ವರ್ಷ ನಮ್ಮ ಮತ್ತು ನಿಮ್ಮ ಭೇಟಿ ಬದ್ರುಸ್ಸುಗ್ರ್‌ದಲ್ಲಿ ಆಗುವುದು, ನಾವು ಅಲ್ಲಿ ಯುದ್ಧ ಮಾಡುವೆವು. ಹಝ್ರತ್ ಪೈಗಂಬರ್(ಸ) ಅದಕ್ಕೆ ಸರಿ, ಇನ್‌ಶಾ ಅಲ್ಲಾಹ್ ಎಂದು ಉತ್ತರ ಕೊಡಲು ಹಝ್ರತ್ ಉಮರ್‌ರೊಡನೆ ಹೇಳಿದ್ದರು. ಅಲ್ಲಾಮಾ ಬೈಝಾವಿಯವರು ಹಝ್ರತ್ ಪೈಗಂಬರ್(ಸ) ಸ್ವತಃ ಇನ್‌ಶಾ ಅಲ್ಲಾಹ್ ಎಂದು ಹೇಳಿದ್ದರು ಎಂದು ಬರೆದಿದ್ದಾರೆ. ಬದ್ರ್ ಎಂಬುದು ಮಕ್ಕಾ ಮತ್ತು ಮದೀನದ ನಡುವೆ ಇರುವ ಒಂದು ಪ್ರಸಿದ್ಧ ಬಾವಿಯಾಗಿದೆ. ಅದು ಮದೀನದ ದಕ್ಷಿಣ-ಪಶ್ಚಿಮದಲ್ಲಿ ನೂರ್ಯೆವತ್ತು ಕಿಲೋಮೀಟರ್ ದೂರದಲ್ಲಿದೆ. ಜಾಹಿಲಿಯ ಕಾಲದಲ್ಲಿ ಅಲ್ಲಿ ದ್ಃಖಅ್‌ದ

ಒಂದರಿಂದ ಎಂಟು ದಿನಗಳಿಗೆ ಒಂದು ದೊಡ್ಡ ಜಾತ್ರೆ ನಡೆಯುತ್ತಿತ್ತು. ಇದು ಈ ಸ್ಥಳದ ಲೊಕೇಷನ್ ಆಗಿದೆ. ಅಬೂಸುಫ್‌ಯಾನ್ ಅಂತೂ ಉತ್ಸಾಹಭರಿತನಾಗಿ ಯುದ್ಧದ ಘೋಷಣೆ ಮಾಡಿದ್ದನು. ಆದರೆ ಸಮಯ ನಿಕಟವಾಗುತ್ತಲೇ ಅಬೂಸುಫ್‌ಯಾನ್ ಯುದ್ಧದಿಂದ ಹಿಂದೆ ಸರಿಯಲು ಪ್ರಯತ್ನಿಸುತ್ತಿದ್ದನು. ಆದರೆ ಅತನು ದೊಡ್ಡದಾದೊಂದು ಸೇನೆಯೊಂದಿಗೆ ಮದೀನದ ಮೇಲೆ ದಾಳಿ ನಡೆಸಲು ತಯಾರಿ ಮಾಡುತ್ತಿರುವಂತೆ ತೋರಿಕೆ ಮಾಡುತ್ತಿದ್ದನು. ಹೀಗೆ ಮಾಡುವುದರಿಂದ ಈ ಸುದ್ದಿ ಮದೀನಾದ ಜನರಿಗೆ ಮತ್ತು ಅರೇಬಿಯಾದ ಉಳಿದೆ ಭಾಗಗಳಿಗೆ ತಲುಪುತ್ತದೆ ಇದರಿಂದ ಮುಸ್ಲಿಮರು ಭಯಭೀತರಾಗುತ್ತಾರೆ ಎಂದು ಭಾವಿಸಿದ್ದನು. ಈ ಮಧ್ಯೆ, **ಬನೂಅಶ್‌ಜಾ** ಗೋತ್ರಕ್ಕೆ ಸಂಬಂಧಿಸಿದ ನುಐಮ್ ಬಿನ್ ಮಸ್‌ಊದ್ ಎಂಬುವನು ಮದೀನಕದಕೆ ಹೋದನು. ನಂತರ ಅವರು ಇಸ್ಲಾಂ ಧರ್ಮವನ್ನೂ ಸ್ವೀಕರಿಸಿದರು. ಅಲ್ಲಿ ಅವರು ಅಬೂಸುಫ್ಯಾನ್ ರನ್ನು ಭೇಟಿಯಾಗಿ ಮುಸಲ್ಮಾನರ ಸಿದ್ಧತೆಗಳ ಬಗ್ಗೆ ನಿಮಗೆ ತಿಳಿಸಲು ನಾನು ಮಕ್ಕಾಗೆ ಬಂದಿರುವೆನು ಎಂದು ಹೇಳಿದರು. ಅವರು (ಮುಸ್ಲಿಮರು) ಅಪಾರವಾದ ಆಯುಧಗಳು, ಒಂಟೆಗಳು ಮತ್ತು ಕುದುರೆಗಳನ್ನು ಹೊಂದಿದ್ದಾರೆ ಮತ್ತು ಅವರ ಪ್ರತಿಜ್ಞಬದ್ಧ ಗೋತ್ರಗಳನ್ನು ತಮ್ಮೊಂದಿಗೆ ಒಟ್ಟುಗೂಡಿಸಿರುವುದನ್ನು ನಾನೇ ಸ್ವತಃ ನೋಡಿದ್ದೇನೆ. ಈಗ ಅವರು ದೊಡ್ಡ ಬಲದಿಂದ ದಾಳಿ ಮಾಡಲು ಹೊರಟಿದ್ದಾರೆ. ಇಗೋ, ನೀವೇ ಸ್ವತಃ ಯುದ್ಧಕ್ಕಾಗಿ ಕರೆದಿದ್ದೀರಿ, ಈಗ ಆ ವಾಗ್ದಾನದ ಸಮಯವು ಹತ್ತಿರದಲ್ಲಿದೆ. ಆದ್ದರಿಂದ ನೀನು ಯುದ್ಧಭೂಮಿಯಲ್ಲಿ ನಿನ್ನ ಸಾರವನ್ನು ತೋರಿಸು. ಅಬುಸುಫ್ಯಾನ್ ಮಾತನಾಡುವುದನ್ನು ತಪ್ಪಿಸುತ್ತಾ ಹೀಗೆ ಹೇಳಿದನು: ಎಲೈ ಸುಐಮ್! ನಮ್ಮ ಪ್ರದೇಶದಲ್ಲಿ ಬರಗಾಲವಿದೆ ಎಂದು ನಿಮಗೆ ತಿಳಿದಿದೆ. ಬಹಳ ದಿನಗಳಿಂದ ಮಳೆಯಾಗಿಲ್ಲ. ನೀರಿನ ಹೊಂಡಗಳು ಬತ್ತಿವೆ. ದನ ಮತ್ತು ಸವಾರಿ ಪ್ರಾಣಿಗಳಿಗೆ ಹುಲ್ಲುಗಾವಲುಗಳಲ್ಲಿ ಹುಲ್ಲು ಕೂಡ ಇಲ್ಲ. ಎಲ್ಲೆಂದರಲ್ಲಿ ಜೀವನಾಂಶದ ಕೊರತೆ ಇದೆ. ಆದ್ದರಿಂದ ನಾವು ಈ ದಿನಗಳನ್ನು ಕಳೆಯುವುದು ಬುದ್ಧಿವಂತಿಕೆಯಾಗಿದೆ, ಅದಕ್ಕಾಗಿ ನೀವು ಪ್ರಮುಖ ಪಾತ್ರವನ್ನು ವಹಿಸಬಹುದು. ಆತನಿಂದ ಸಹಾಯ ಯಾಚಿಸಿದನು, ನೀವು ಮದೀನಾಗೆ ಹೋಗಿ ನಮ್ಮ ಉದ್ದೇಶಗಳು ಮತ್ತು ಜನಬಲದ ಬಗ್ಗೆ ಉತ್ಪ್ರೇಕ್ಷಿತ ಮಾಹಿತಿಯನ್ನು ಜನರಿಗೆ ನೀಡಿ ಮತ್ತು ನಮ್ಮ ಭ್ರಮೆ ಉಳಿದುಕೊಳ್ಳುವಂತೆ ಮತ್ತು ಮುಸ್ಲಿಮರು ಭಯದಿಂದ ಬದ್ರ್‌ಗೆ ಬರದಂತೆ ಅವರಿಗೆ ಮಾಹಿತಿ ನೀಡಲು ಹೇಳಿದನು. ನುಐಮ್ ಹೇಳಿದರು, ನೀವು ನನಗೆ ಪ್ರತಿಯಾಗಿ ಏನು ಕೊಡುತ್ತೀರಿ? ಅಬುಸುಫ್ಯಾನ್ ಇಪ್ಪತ್ತು ಒಂಟೆಗಳನ್ನು ಅರ್ಪಿಸಿದನು, ಅದನ್ನು ನುಐಮ್ ಸಂತೋಷದಿಂದ ಸ್ವೀಕರಿಸಿದರು ಮತ್ತು ಈ ಬಹುಮಾನವನ್ನು ಸುಹೇಲ್ ಬಿನ್ ಅಮ್ರ್ ಅವರಿಗೆ ವಹಿಸಿಕೊಡುವಂತೆ ಕೇಳಿಕೊಂಡರು. ನಂತರ ನಾನು ಆ ಕೆಲಸಕ್ಕೆ ಹೋಗುತ್ತೇನೆ. ಸುಹೇಲ್ ಅವರ ಆಪ್ತ ಗೆಳೆಯರಾಗಿದ್ದರಿಂದ ಆತನ ಭರವಸೆಯ ಮೇರೆಗೆ ನುಐಮ್ ಹೋಗಲು ಸಿದ್ಧನಾದರು. ಆದಷ್ಟು ಬೇಗ ಯೋಜನೆಯನ್ನು ಕಾರ್ಯಗತಗೊಳಿಸಲು ಅವರಿಗೆ ವೇಗದ ಒಂಟೆಯನ್ನು ನೀಡಲಾಯಿತು. (ದಾಎರಾ ಮುಆರಿಫ್ ಸೀರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್, ಸಂಪುಟ–7, ಪುಟ–240, ಬಝ್ಮ್ ಇಖ್ಬಾಲ್ ಲಾಹೋರ್ 2022) (ಅಟ್ಲಸ್ ಸೀರತುನ್ನಬಿ(ಸ), ಪುಟ–216, ದಾರುಸ್ಸಲಾಮ್ ರಿಯಾಝ್ 1424ಹಿಜರಿ) (ಸಬ್ಲುಲ್ ಹುದಾ ವರ್‌ರಶಾದ್, ಸಮಪುಟ–4, ಪುಟ–337, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 1993) (ಗಝ್ವಾತ್ ಅನ್ನಬೀ(ಸ), ಪುಟ–259, ಝಿಯಾ ಪಬ್ಲಿಷರ್ಸ್ ಲಾಹೋರ್ 2018)

ನುಐಮ್ ತನ್ನ ಚೀಲವನ್ನು ಕಟ್ಟಿಕೊಂಡು ಮದೀನಾಗೆ ಹೋದನು. ಆತನು ಉಮ್ರಾ ಮಾಡಿ ತಲೆ ಬೋಳಿಸಿಕೊಂಡಿದ್ದನು. ಅವನು ಮದೀನಾ ಕಡೆಗೆ ಓಡುತ್ತಿದ್ದನು. ಇಸ್ಲಾಮಿನ ಸೈನ್ಯವು ಮದೀನಾವನ್ನು ತೊರೆಯದಂತೆ ಅವನು ತಕ್ಷಣವೇ ಮದೀನಾಗೆ ತಲುಪಲು ಬಯಸಿದ್ದನು. ಅವನು ಮದೀನಾ ತಲುಪಿದಾಗ, ಮುಸ್ಲಿಮರು ಬಹಳ ಉತ್ಸಾಹದಿಂದ ಜಿಹಾದ್ ತಯಾರಿಯಲ್ಲಿ ನಿರತರಾಗಿದ್ದರು. ಮುಸ್ಲಿಮರು ಅವನನ್ನು ನುಐಮ್! ನೀನು ಎಲ್ಲಿಂದ ಬಂದಿರುವೆ? ಎಂದು ಕೇಳಿದರು. ಅದಕ್ಕೆ ಅವನು ನಾನು ಉಮ್ರಾ ಮುಗಿಸಿ ಮಕ್ಕಾದಿಂದ ಬರುತ್ತಿದ್ದೇನೆ ಎಂದು ಹೇಳಿದನು. ಅವರು ಹೇಳಿದರು: ಹಾಗಾದರೆ ನಿಮಗೆ ಅಬೂಸುಫ್ಯಾನ್ ಬಗ್ಗೆ ತಿಳಿದಿರುತ್ತದೆ. ಅವನ ಯುದ್ಧದ ಸಿದ್ಧತೆಗಳು ಹೇಗಿವೆ? ಅದಕ್ಕೆ ಅವನು ಹೇಳಿದನು: ಅಬುಸುಫ್ಯಾನ್ ಅನೇಕ ಸೈನ್ಯಗಳನ್ನು ಸಂಗ್ರಹಿಸಿದ್ದಾನೆ, ಎಲ್ಲಾ ಅರಬ್ಬರು ಅವನೊಂದಿಗೆ ಸೇರಿಸಿಕೊಂಡಿದ್ದಾನೆ. ಅವನು ಬಹಳ ಅತಿಶಯೋಕ್ತಿಯ ಮಾತುಗಳನ್ನು ಹೇಳಿದನು. ಅವನೊಡನೆ ಯುದ್ಧವಾಡುವುದು ನಿಮ್ಮಿಂದಾಗುವಷ್ಟು ದೊಡ್ಡ ಸೈನ್ಯವನ್ನು ತರುತ್ತಿದ್ದಾನೆ. ನನ್ನನ್ನು ನಂಬಿರಿ, ನೀವು ಮದೀನಾದಲ್ಲಿಯೇ ಉಳಿದುಕೊಂಡಿರಿ. ಮದೀನಾದಿಂದ ಹೊರಗೆ ಹೋರಾಡಲು ಹೋಗಬೇಡಿ. ಓಡಿಹೋದವರು ಮಾತ್ರ ಬದುಕುಳಿಯುವಷ್ಟು ದೊಡ್ಡ ಸೈನ್ಯದೊಂದಿಗೆ ಅವನು ಆಕ್ರಮಣ ಮಾಡಲಿದ್ದಾನೆ. ನಿಮ್ಮ ಪ್ರಮುಖ ಜನರು ಕೊಲ್ಲಲ್ಪಡುತ್ತಾರೆ. ಸ್ವತಃ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿವ ಸಲ್ಲಮ್) ಗಾಯಗಳನ್ನು ಸಹಿಸಲು ಸಾಧ್ಯವಾಗುವುದಿಲ್ಲ. ನೀವೆಲ್ಲರು ಮದೀನಾ ಬಿಟ್ಟು ಸಾವಿನ ಬಾಯಿಗೆ ಹೋಗಬೇಕೆಂದು ಬಯಸುವಿರಾ? ನೀವು ನಿಮಗಾಗಿ ತುಂಬಾ ಕೆಟ್ಟ ನಿರ್ಧಾರ ತೆಗೆದುಕೊಂಡಿದ್ದೀರಿ. ಅಲ್ಲಾಹನ ಆಣೆ! ನಿಮ್ಮಲ್ಲಿ ಯಾರೂ ಬದುಕುಳಿಯುವುದಿಲ್ಲ ಎಂದು ನಾನು ಯೋಚಿಸುತ್ತೇನೆ. ಅವರನ್ನು (ಮುಸ್ಲಿಮರನ್ನು) ಭಯಪಡಿಸಲು ಅವನು ತುಂಬಾ ಹತಾಶ ವಿಷಯಗಳನ್ನು ಹೇಳಿದನು. ಅವನು ಕೆಲವೊಮ್ಮೆ ಅಬುಸುಫ್ಯಾನ್ ಸಿದ್ಧಪಡಿಸಿದ ಸೈನ್ಯದ ಸಂಖ್ಯಾತ್ಮಕ ಸಮೃದ್ಧಿಯನ್ನು ಉಲ್ಲೇಖಿಸಿದ, ಕೆಲವೊಮ್ಮೆ ಅವನು ತನ್ನ ಶಸ್ತ್ರಾಸ್ತ್ರಗಳ ಸಂಗ್ರಹವನ್ನು ವಿವರಿಸಿದನು, ಕೆಲವೊಮ್ಮೆ ಅವನು ಖುರೈಶ್ ನಾಯಕರ ಉತ್ಸಾಹವನ್ನು ವಿವರಿಸಿದನು, ಕೆಲವೊಮ್ಮೆ ಅವರ ಅಪಾಯಕಾರಿ ಯುದ್ಧ ತಂತ್ರಗಳನ್ನು ಹೊಗಳಿದನು. ಅವನು ತನ್ನ ಯೋಜನೆಯನ್ನು ಎಷ್ಟು ಕೌಶಲ್ಯದಿಂದ ನಡೆಸಿದನು ಎಂದರೆ ಕೆಲವೇ ದಿನಗಳಲ್ಲಿ ಮದೀನಾದ ಪರಿಸರವು ಭಯ ಮತ್ತು ಭೀತಿಯ ವಿಷಪೂರಿತವಾಯಿತು.

ನುಐಮ್ ಬಿನ್ ಮಸ್‌ಊದ್ ಅವರ ತಂತ್ರವು ಪರಿಣಾಮಕಾರಿ ಎಂದು ಸಾಬೀತಾಯಿತು. ದುರ್ಬಲ ವಿಶ್ವಾಸ ಮುಸ್ಲಿಮರು ಅವನ ವದಂತಿಗಳಿಂದ ನಿಜವಾಗಿಯೂ ಆಕರ್ಷಿತರಾದರು, ಯಾರು ಮಾತನಾಡಿದರೂ ಸಹ ನುಐಮ್ ಬಿನ್ ಮಸ್‌ಊದ್‌ನ ಮಾತುಗಳನ್ನು ದೃಢೀಕರಿಸುತ್ತಿದ್ದರು. ಪ್ರತಿ ಸಭೆಯಲ್ಲೂ ಅಬುಸುಫ್ಯಾನ್‌ನ ಸೈನ್ಯ ಮತ್ತು ಭಯಾನಕ ಸಿದ್ಧತೆಗಳನ್ನು ಉಲ್ಲೇಖಿಸಲಾಗಿತ್ತು. ಮುಸಲ್ಮಾನರ ಈ ಸ್ಥಿತಿಯನ್ನು ಕಂಡು ಯಹೂದಿಗಳು ಮತ್ತು ಕಪಟಿಗಳು ಸಂತೋಷಪಡುತ್ತಿದ್ದರು ಮತ್ತು ಈಗ ಇಸ್ಲಾಂ ಧರ್ಮದ ಅನುಯಾಯಿಗಳ ಅಸ್ತಿತ್ವವು ಅಳಿಸಿಹೋಗುತ್ತದೆ ಎಂಬ ಶುಭ ಸುದ್ದಿಯನ್ನು ಪರಸ್ಪರ ಹೇಳಿಕೊಳ್ಳುತ್ತಿದ್ದರು.
(ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ–7, ಪುಟ–91, ದಾರುಸ್ಸಲಾಮ್ ರಿಯಾದ್ 1435 ಹಿಜರಿ)

ಮದೀನಾದ ಈ ಪರಿಸ್ಥಿತಿಯ ಸಂದರ್ಭದಲ್ಲಿ ಹಝ್‌ರತ್ ಅಬೂಬಕರ್(ರ) ಮತ್ತು ಹಝ್‌ರತ್ ಉಮರ್(ರ) ಹಝ್‌ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾಗಿ ಹೀಗೆ ಹೇಳಿದರು: ಯಾ ರಸೂಲಲ್ಲಾಹ್(ಸ)! ಸರ್ವಶಕ್ತನಾದ ಅಲ್ಲಾಹನು ತನ್ನ ಧರ್ಮವನ್ನು ಮೇಲುಗೈ ಸಾಧಿಸುವನು. ಅವನು ತನ್ನ ಪ್ರವಾದಿಯನ್ನು ಗೌರವಿಸುವನು. ನಾವು ಸಮುದಾಯದವರಿಗೆ ವಾಗ್ದಾನ ನೀಡಿದ್ದೇವೆ ನಾವು ಆ ವಾಗ್ದಾನವನ್ನು ಮುರಿಯಲು ಇಷ್ಟಪಡುವುದಿಲ್ಲ. ನಾವು ಯುದ್ಧಕ್ಷೇತ್ರಕ್ಕೆ ಹೋಗದಿದ್ದರೆ ಅವರು ಅಂದರೆ ಅವಿಶ್ವಾಸಿಗಳು ಅದನ್ನು ಹೇಡಿತನ ಎಂದು ಪರಿಗಣಿಸುತ್ತಾರೆ. ಆದ್ದರಿಂದ ನೀವು(ಸ) ವಾಗ್ದಾನ ಮಾಡಿದಂತೆ ಹೊರಡಿರಿ. ಅಲ್ಲಾಹನ ಆಣೆ ಅದರಲ್ಲಿ ಖಂಡಿತವಾಗಿಯೂ ಒಳ್ಳೆಯದಿದೆ. ಈ ಭಾವನೆಗಳನ್ನು ಆಲಿಸಿ ಹಝ್‌ರತ್ ಪೈಗಂಬರ್(ಸ) ಬಹಳ ಸಂತೋಷಪಟ್ಟರು ಮತ್ತು ಹೇಳಿದರು: **ವಲ್ಲಝೀ ನಫ್ಸೀ ಬಿಯದಿಹೀ ಲಅಖ್ರುಜನ್ನ ವ ಇನ್‌ಲ್ಲಮ್ ಯಖ್ರುಜ್ ಮಇಯ ಅಹದುನ್**– ಅಲ್ಲಾಹನ ಆಣೆ! ನನ್ನ ಜೀವ ಯಾರ ಕೈಯಲ್ಲಿದೆಯೊ, ಒಬ್ಬನೇ ಒಬ್ಬ ವ್ಯಕ್ತಿ ನನ್ನೊಂದಿಗೆ ಹೋಗದಿದ್ದರೂ ನಾನು ಖಂಡಿತವಾಗಿಯೂ ಹೊರಗೆ ಹೋಗುತ್ತೇನೆ.

ಮುಸ್ಲಿಮರು ಹಝ್‌ರತ್ ಪೈಗಂಬರ್(ಸ)ರ ದೃಢತೆ, ಧೈರ್ಯ ಮತ್ತು ದೃಢಸಂಕಲ್ಪ ಕಂಡಾಗ, ಭಯ ಮತ್ತು ಭೀತಿಯ ಸ್ಥಿತಿ ಕೊನೆಗೊಂಡಿತು ಮತ್ತು ಅವರು ಉತ್ಸಾಹದಿಂದ ತಯಾರಿ ಪ್ರಾರಂಭಿಸಿದರು.
(ದಾಡರಾ ಮುಆರಿಫ್ ಸೀರತ್ ಮುಹಮ್ಮದ್(ಸ), ಸಂಪುಟ–7, ಪುಟ–241–242, ಬಝ್ಮ್ ಇಖ್ಬಾಲ್ ಲಾಹೋರ್ 2022)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಉಹುದ್ ಯುದ್ಧದ ವಿಜಯ ಮತ್ತು ದೊಡ್ಡದಾದ ಸಂಘವಿದ್ದೂ ಕೂಡ ಅಬೂಸುಫ್‌ಯಾನ್ ಬಿನ್ ಹರ್‌ಬ್ ಹೆದರಿಕೊಂಡಿದ್ದನು. ಆ ವೇಳೆ ಇಸ್ಲಾಂ ಧರ್ಮ ನಾಶದ ಅಂಚಿನಲ್ಲಿ ಇರುವುದಾಗಿ ಕಂಡೂ ಕೂಡ ದೊಡ್ಡದಾದ ಸಂಘ ತನ್ನ ಜೊತೆಗೆ ಇರುವ ಹೊರತು ಮುಸ್ಲಿಮರೊಡನೆ ಮುಖಾಮುಖಿಯಾಗಬಾರದು ಎಂದು ಬಯಸುತ್ತಿದ್ದನು. ಆದ್ದರಿಂದ ಅವನು ಇನ್ನೂ ಮಕ್ಕಾದಲ್ಲಿದ್ದಾಗ, ಅವನು ತಟಸ್ಥ ಗೋತ್ರಕ್ಕೆ ಸೇರಿದ ನುಐಮ್ ಎಂಬ ವ್ಯಕ್ತಿಯನ್ನು ಮದೀನಾಗೆ ಕಳುಹಿಸಿ ಮುಸ್ಲಿಮರಿಗೆ ಬೆದರಿಕೆ ಹಾಕುವ ಮೂಲಕ ಮತ್ತು ಯಾವುದೇ ರೀತಿಯಲ್ಲಿ ಮುಸ್ಲಿಮರಿಗೆ ಯುದ್ಧದಿಂದ ತಡೆಯಲು ಒತ್ತಾಯಿಸಿದನು. ಹೀಗಾಗಿ ಆ ವ್ಯಕ್ತಿ ಮದೀನಾಗೆ ಬಂದು ಖುರೈಷಿಗಳ ತಯಾರಿ ಮತ್ತು ಶಕ್ತಿ ಮತ್ತು ಅವರ ಉತ್ಸಾಹದ ಬಗ್ಗೆ ಸುಳ್ಳು ಕಥೆಗಳನ್ನು ಹೇಳುತ್ತಾ ಮದೀನಾದಲ್ಲಿ ಆತಂಕದ ಸ್ಥಿತಿಯನ್ನು ಸೃಷ್ಟಿಸಿದನು. ಕೆಲವು ದುರ್ಬಲ ಮನಸ್ಸಿನ ಜನರು ಸಹ ಈ ಯುದ್ಧಕ್ಕೆ

ಸೇರಲು ಹೆದರುತ್ತಿದ್ದರು, ಆದರೆ ಹಝ್ರತ್ ಪೈಗಂಬರ್(ಸ) ಅವರು ಹೊರಡುವ ಸೂಚನೆಯನ್ನು ನೀಡಿದಾಗ ಅವರು ತಮ್ಮ ಭಾಷಣದಲ್ಲಿ ನಾವು ಅವಿಶ್ವಾಸಿಗಳ ಚೆಲೆಂಜನ್ನು ಸ್ವೀಕರಿಸಿ ಈ ಸಂದರ್ಭದಲ್ಲಿ ಹೊರಡುತ್ತೇವೆ ಎಂಬ ವಾಗ್ದಾನ ಮಾಡಿದ್ದೇವೆ ಆದ್ದರಿಂದ ನಾವು ಅದನ್ನು ಉಲ್ಲಂಘಿಸಲು ಸಾಧ್ಯವಿಲ್ಲ ಮತ್ತು ನಾನು ಒಬ್ಬಂಟಿಯಾಗಿ ಹೋಗಬೇಕಾದರೂ, ನಾನು ಏಕಾಂಗಿಯಾಗಿ ಹೋಗಿ ಶತ್ರುಗಳನ್ನು ಎದುರಿಸುತ್ತೇನೆ ಎಂದಿ ಹೇಳಿದಾಗ ಅಲ್ಲಿ ಉಪಸ್ಥಿತರಿದ್ದ ಜನರ ಭಯವು ಮತ್ತು ಆತಂಕವು ಮಾಯವಾಯಿತು ಮತ್ತು ಅವರು ಉತ್ಸಾಹ ಮತ್ತು ಪ್ರಾಮಾಣಿಕತೆಯಿಂದ ನಿಮ್ಮೊಂದಿಗೆ ಹೊರಡಲು ಸಿದ್ಧರಾದರು. (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎ.ಎ, ಪುಟ–529)

ಮತ್ತು ಹೀಗೆ ಮತ್ತೊಮ್ಮೆ ಸಿದ್ಧತೆಗಳು ಪ್ರಾರಂಭವಾಯಿತು. ಆದಾಗ್ಯೂ, ಹಝ್ರತ್ ಪೈಗಂಬರ್(ಸ)ರಿಗೆ ಅಬೂಸುಫ್ಯಾನಿನ ಸೇನೆಯ ತಯಾರಿಯ ವಾರ್ತೆ ಲಭಿಸಿದಾಗ ಅವರು ತನ್ನ ಸ್ಥಾನದಲ್ಲಿ ಕಪಟವಿಶ್ವಾಸಿಗಳ ಸರದಾರ ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸುಲೂಲ್‌ನ ಪುತ್ರನಾದ ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸುಲೂಲ್‌ರನ್ನು ಮದೀನದ ಅಮೀರನ್ನಾಗಿ ನೇಮಿಸಿದರು. ಅವರು ಒಬ್ಬ ಉತ್ತಮ ಮುಸ್ಲಿಮ್ ಹಾಗೂ ನಿಷ್ಠಾವಂತ ಸಹಾಬಿ ಆಗಿದ್ದರು. ಒಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬ್ದುಲ್ಲಾಹ್ ಬಿನ್ ರವಾಹ(ರ)ರನ್ನು ಅಮೀರನ್ನಾಗಿ ನೇಮಿಸಿದ್ದರು. ಆದಾಗ್ಯೂ, ವಿಭಿನ್ನ ಕರ್ಯಗಳಿಗೆ ಇಬ್ಬರನ್ನೂ ನೇಮಿರಬಹುದು ಅಥವಾ ವರದಿಗಾರನಿಗೆ ಅಬ್ದುಲ್ಲಾ ಎಂಬ ಹೆಸರಿನಲ್ಲಿ ಗೊಂದಲವಾಗಿರಬಹುದು. ಯಾರೊಬ್ಬರು ಅಬ್ದುಲ್ಲಾಹ್ ಬಿನ್ ಅಬ್ದುಲ್ಲಾ ಎಂದು ಹೇಳಿದರು ಮತ್ತೊಬ್ಬರು ಅಬ್ದುಲ್ಲಾ ಬಿನ್ ರವಾಹ ಎಂದು ಹೇಳಿದರು. ತದನಂತರ ಹಝ್ರತ್ ಪೈಗಂಬರ್(ಸ) ಅವರು ಹಝ್ರತ್ ಅಲಿ(ರ) ಅವರಿಗೆ ತಮ್ಮ ಧ್ವಜವನ್ನು ನೀಡಿದರು ಮತ್ತು ಹದಿನೈದು ನೂರು ಸಹಾಬೀಯರೊಂದಿಗೆ ಬದರ್ ಮೈದಾನದ ಕಡೆಗೆ ಹೊರಟರು. ಈ ಸೈನ್ಯದಲ್ಲಿ ಹತ್ತು ಕುದುರೆ ಸವಾರರಿದ್ದರು. ಒಂದು ಕುದುರೆ ಹಝ್ರತ್ ಪೈಗಂಬರ್(ಸ) ಅವರಿಗಾಗಿತ್ತು. ಇದಲ್ಲದೆ, ಹಝ್ರತ್ ಅಬುಬಕರ್(ರ), ಹಝ್ರತ್ ಉಮರ್(ರ), ಹಝ್ರತ್ ಅಬು ಕತಾದಾ(ರ), ಹಝ್ರತ್ ಸಯೀದ್ ಬಿನ್ ಝೈದ್(ರ), ಹಝ್ರತ್ ಮಿಕ್ದಾದ್ ಬಿನ್ ಅಸ್ವದ್(ರ), ಹಝ್ರತ್ ಹುಬಾಬ್ ಬಿನ್ ಮುಂಧೀರ್(ರ), ಹಝ್ರತ್ ಝುಬೈರ್ ಬಿನ್ ಅವ್ವಾಮ್(ರ), ಹಝ್ರತ್ ಅಬ್ಬಾದ್ ಬಿನ್ ಬಿಷರ್(ರ) ಅವರೆಲ್ಲರು ಕುದುರೆಗಳನ್ನು ಹೊಂದಿದ್ದರು. ಮುಸ್ಲಿಮರು ತಮ್ಮ ವ್ಯಾಪಾರ ಸಾಮಗ್ರಿಗಳೊಂದಿಗೆ ಬದ್ರಿನ ಕಡೆಗೆ ಹೊರಟರು. ಝುಲ್–ಖಾಅದಃದ ಚಂದ್ರನು ಉದಯಿಸಿದಾಗ, ಮುಸ್ಲಿಮರು ಬದ್ರ್ ಕ್ಷೇತ್ರವನ್ನು ತಲುಪಿದ್ದರು. ಬಾಹ್ಯ ನೋಟಕ್ಕೆ ಮುಸ್ಲಿಮರು ಅಬೂಸುಫ್ಯಾನಿನೊಡನೆ ಯುದ್ಧ ಮಾಡಲು ಹೊರಟಿದ್ದರು. ಆದರೆ ಮುಸ್ಲಿಮರು ವ್ಯಾಪಾರ ಸಾಮಾನುಗಳನ್ನು ತಮ್ಮ ಜೊತೆಗೆ ಇಟ್ಟದ್ದು ತಿಳಿಸುವುದೇನೆಂದರೆ, ಅಬೂಸುಫ್ಯಾನ್ ಈ ಯುದ್ಧಕ್ಕಾಗಿ ಬರಲಾರನು ಅಥವಾ ಬಂದರೂ ಕೂಡ ಅಲ್ಲಾಹನು ಮುಸ್ಲಿಮರಿಗೆ ವಿಜಯ ನೀಡುವನು ಹಾಗೂ ಆ ದಿನಾಂಕಗಳಲ್ಲಿ ಜರಗುವ ಮೇಳದಲ್ಲಿ ಮುಸ್ಲಿಮರು ತಮ್ಮ ವ್ಯಾಪಾರ ಸಾಮಗ್ರಿಗಳನ್ನು ಮಾರಾಟ ಮಾಡುವ ಮೂಲಕ ಲಾಭ ಪಡೆಯಬಹುದು ಎಂಬ ದೃಢವಿಶ್ವಾಸ ಮುಸ್ಲಿಮರಿಗೆ ಅಲ್ಲಾಹನ ಅನುಗ್ರಹದಿಂದ ಇತ್ತು. ಹಾಗೆಯೇ ಆಯಿತು ಎಂದು ನಂತರದ ಸ್ಥಿತಿಗತಿಗಳು ತಿಳಿಸುತ್ತವೆ. ವಾಗ್ದಾನದ ಪ್ರಕಾರ, ಹಝ್ರತ್ ಪೈಗಂಬರ್(ಸ) ಅವರು ಬದ್ರ್‌ನಲ್ಲಿ ಅಬುಸುಫ್ಯಾನ್‌ಗಾಗಿ ಕಾಯುತ್ತಿದ್ದರು ಮತ್ತು ಮಕ್ಷಿ ಬಿನ್ ಅಮ್ರ್ ಝುಮ್ರಿ ಅವರ ಬಳಿಗೆ ಬಂದನು. ಅವನು ಬನೂ ಝುಮ್ರಾದ ಮುಖ್ಯಸ್ಥನಾಗಿದ್ದನು ಮತ್ತು ಎರಡು ಹಿಜ್ರಿಯಲ್ಲಿ ಮುಸ್ಲಿಮರು ಈ ಗೋತ್ರದೊಂದಿಗೆ ಒಪ್ಪಂದ ಮಾಡಿಕೊಂಡರು, ಅವರು ಬನೂ ಝುಮ್ರಾ ಅವರ ಮೇಲೆ ದಾಳಿ ಮಾಡುವುದಿಲ್ಲ ಮತ್ತು ಬನೂ ಝುಮ್ರಾ ಹಝ್ರತ್ ಪೈಗಂಬರ್(ಸ) ಅವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ, ಯಾವುದೇ ಕ್ರಮದಲ್ಲಿ ಪಾಲ್ಗೊಳ್ಳುವುದಿಲ್ಲ ಮತ್ತು ಹಝ್ರತ್ ಪೈಗಂಬರ್(ಸ)ರ ಯಾವುದೇ ಶತ್ರುಗಳಿಗೆ ಬೆಂಬಲ ನೀಡುವುದಿಲ್ಲ. ಅವನು ಹೇಳಿದನು, ಓ ಮುಹಮ್ಮದ್(ಸ)! ಈ ಬುಗ್ಗೆಯ ಬಳಿ ನೀವು ಖುರೈಷಿಗಳೊಂದಿಗೆ ಹೋರಾಡಲು ಬಂದಿದ್ದೀರಾ? ಅವನ ಸಂಭಾಷಣೆಯಿಂದ, ಹಝ್ರತ್ ಪೈಗಂಬರ್(ಸ) ಅವರು ಆ ವ್ಯಕ್ತಿಯು ಖುರೈಷ್ ಕಡೆಗೆ ವಾಲುತ್ತಿದ್ದಾನೆ ಎಂದು ಊಹಿಸಿದರು. ಅವರು(ಸ) ಹೌದು ಎಂದು ಹೇಳಿದರು. ಓ ಬನೂ ಝುಮ್ರಾ ಸಹೋದರ! ನೀನು ಬಯಸಿದರೆ, ನಮ್ಮ ಮತ್ತು ನಿಮ್ಮ ನಡುವಿನ ಶಾಂತಿಯ ಒಪ್ಪಂದವನ್ನು ಕೊನೆಗೊಳಿಸುತ್ತೇವೆ ಮತ್ತು ದೇವರು ನಿಮ್ಮ ಮತ್ತು ನಮ್ಮ ನಡುವೆ ನಿರ್ಧಾರ ಮಾಡುವವರೆಗೆ ನಾವು ನಿಮ್ಮೊಂದಿಗೆ ಹೋರಾಡುತ್ತೇವೆ. ಅದಕ್ಕೆ ಮಖ್ಷಿ ಹೇಳಿದನು ಓ ಮುಹಮ್ಮದ್(ಸ)!! ಅಲ್ಲಹನ ಆಣೆ, ನಾವು ನಿಮ್ಮೊಂದಿಗೆ ಹೋರಾಡುವ ಅಗತ್ಯವಿಲ್ಲ. (ಸೀರತುಲ್ ಹಲಬೀಯಾ, ಸಂಪುಟ–2, ಪುಟ–374, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 2002) (ಅಟ್ಲಾಸ್ ಸೀರತ್ ನಬವಿ, ಪುಟ–202, ದಾರುಸ್ಸಲಾಮ್ ರಿಯಾದ್ 1424ಹಿಜರಿ) (ದಾಎರಾ ಮುಆರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ–7, ಪುಟ–242–244, ಬಝ್ಮ್ ಇಖ್ಬಾಲ್ ಲಾಹೋರ್ 2022) (ಅಸ್ಸೀರತುನ್ನಬವೀಯಾ ಲಿಇಬ್ನೆ ಹಿಶಾಮ್, ಪುಟ–618, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 2001)

ಈ ಸಭೆಯಲ್ಲಿ, ಹಝ್ರತ್ ಪೈಗಂಬರ್(ಸ) ಅವರು ನಮ್ಮ ನಡುವಿನ ಕದನ ವಿರಾಮ ಒಪ್ಪಂದವು ಯಾವುದೇ ಹೇಡಿತನ ಮತ್ತು ದೌರ್ಬಲ್ಯವನ್ನು ಆಧರಿಸಿಲ್ಲ ಎಂದು ಈ ಗೋತ್ರದವರಿಗೆ ಯುಕ್ತಿ ಮತ್ತು ಧೈರ್ಯದಿಂದ ಸ್ಪಷ್ಟಪಡಿಸಿದರು, ಹೀಗಾಗಿ ಉಹುದ್ ಯುದ್ಧದ ನಂತರ, ಮುಸ್ಲಿಮರನ್ನು ದುರ್ಬಲರೆಂದು ಪರಿಗಣಿಸಿದ ವಿವಿಧ ಗೋತ್ರದವರು ಅವರ ಮೇಲೆ ದಾಳಿ ಮಾಡಲು ಯೋಜಿಸಿದರು ಮತ್ತು ಬಹಳ ಯುಕ್ತಿಯೊಂದಿಗೆ ಮತ್ತು ಯಶಸ್ಸಿನೊಂದಿಗೆ, ಹಝ್ರತ್ ಪೈಗಂಬರ್(ಸ) ಅವರು ಮುಸ್ಲಿಮರ ಶಕ್ತಿ ಮತ್ತು ಧೈರ್ಯದ ಭಾವನೆಗಳನ್ನು ಪುನಃಸ್ಥಾಪಿಸಿದರು. (ಸೀರತ್ ಇನ್ಸೈಕ್ಲೊಪೀಡಿಯಾ, ಸಂಪುಟ–7, ಪುಟ–97, ದಾರುಸ್ಸಲಾಮ್ ರಿಯಾದ್ 1435 ಹಿಜರಿ)

ಮುಸ್ಲಿಮರು ವಾಗ್ದಾನದ ಪ್ರಕಾರ ಯುದ್ಧಕ್ಕಾಗಿ ಮೈದಾನಕ್ಕೆ ತಲುಪಿದರು. ಆದರೆ ಮತ್ತೊಂದೆಡೆ ಅಬೂಸುಫ್ಯಾನ್ ಖುರೈಶೀ ಸರದಾರರೊಡನೆ ಹೀಗೆ ಹೇಳಿದನು: ನಾವು ನುಐಮ್‌ರನ್ನು ಕಳುಹಿಸಿದ್ದೇವೆ. ಮುಸ್ಲಿಮರು ಹೊರಡುವುದಕ್ಕೆ ಮುಂಚಿತವಾಗಿಯೇ ಆತನು ಅವರ ಧೈರ್ಯಗುಂದಿಸುವನು. ಆತನು ಅದಕ್ಕಾಗಿ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದಾನೆ. ಆದರೆ ನಾವು ಒಂದು ಅಥವಾ ಎರಡು ರಾತ್ರಿಗಳಿಗಾಗಿ ಹೊರಟು ಮರಳಿ ಬರಬಹುದು ಮುಸ್ಲಿಮರು ಯುದ್ಧಕ್ಕಾಗಿ ಹೊರಡದಿದ್ದರೆ, ಮುಸ್ಲಿಮರು ಯುದ್ಧಕ್ಕಾಗಿ ಬರಲಿಲ್ಲ ಮತ್ತು ನಾವು ವಿಜಯ ಸಾಧಿಸಿದ್ದೇವೆ ಎಂದು ಹೇಳೋಣ. ಇನ್ನೇನಾದರೂ ಮುಸ್ಲಿಮರು ಯುದ್ಧಕ್ಕಾಗಿ ಹೊರಟರೂ ಕೂಡ ನಾವು ಮರಳಿ ಬಂದು ಹೀಗೆ ಹೇಳೋಣ: ಈ ವರ್ಷ ನಮಗೆ ಬರಗಾಲದ ವರ್ಷವಾಗಿದೆ. ಯುದ್ಧಕ್ಕಾಗಿ ವಸಂತ ಕಾಲ ಅನುಯೋಜ್ಯವಾಗಿರುವುದು ಎಂದು. ಖುರೈಶಿಯರು ಅಬೂಸುಫ್ಯಾನಿನ ಸಲಹೆಯನ್ನು ಇಷ್ಟಪಟ್ಟರು. ಆತನ ನೇತೃತ್ವದಲ್ಲಿ ಎರಡು ಸಾವಿರ ಸೈನಿಕರು ಹೊರಟರು. ಅವರಲ್ಲಿ ಐವತ್ತು ಮಂದಿ ಅಶ್ವದಳದವರಿದ್ದರು. ಈ ಸೈನ್ಯವು **ಮರ್ರುಝ್ಝುಹ್‌ರಾನ್** ಕಣಿವೆಯಲ್ಲಿರುವ **ಮಜನ್ನಾ** ಎಂಬ ಬುಗ್ಗೆಯಲ್ಲಿ ಬೀಡುಬಿಟ್ಟಿತು. **ಮರ್ರುಝ್ಝುಹ್‌ರಾನ್** ಮಕ್ಕಾದಿಂದ ಉತ್ತರಕ್ಕೆ ಇಪ್ಪತ್ತೆರಡು ಕಿಲೋಮೀಟರ್ ದೂರದಲ್ಲಿದೆ. ಕ್ಷಾಮದಿಂದಾಗಿ, ಖುರೈಷಿಗಳ ಆರ್ಥಿಕ ಸ್ಥಿತಿಯು ನಿಜವಾಗಿಯೂ ಕೆಟ್ಟದಾಗಿತ್ತು ಮತ್ತು ಅವರ ಆದಾಯದ ಮೂಲಗಳು ಕಡಿಮೆಯಾದವು. ಆದ್ದರಿಂದ, ನಿಗದಿತ ಸಮಯ ಮತ್ತು ಸ್ಥಳವನ್ನು ತಲುಪಲು ಅವರಿಗೆ ಧೈರ್ಯವಾಗಲಿಲ್ಲ, ಅಂದರೆ ಬದ್ರ್ ತಲುಪಲು, ಆದರೆ ಅವಮಾನಕ್ಕೆ ಹೆದರಿ, ಈ ಸೈನ್ಯವು ಸಾಗಿತು. ಅವರ ಸೈನ್ಯದ ಕಮಾಂಡರ್ ಮಕ್ಕಾದಿಂದಲೇ ಅತೃಪ್ತನಾಗಿದ್ದನು. ಅವನು ಪದೇ ಪದೇ ಮುಸ್ಲಿಮರೊಂದಿಗೆ ನಡೆಯಲಿರುವ ಯುದ್ಧದ ಪರಿಣಾಮದ ಬಗ್ಗೆ ಯೋಚಿಸುತ್ತಿದ್ದನು ಮತ್ತು ಅವರ ವಿಸ್ಮಯದಿಂದ ನಡುಗುತ್ತಿದ್ದನು. **ಮರ್ರುಝ್ಝುಹ್‌ರಾನ್** ತಲುಪಿದಾಗ ಅವನ ಧೈರ್ಯಗುಂದಿತು ಮತ್ತು ಅವನು ಹಿಂದಿರುಗಲು ಮನ್ನಿಸುವ ಬಗ್ಗೆ ಯೋಚಿಸಲು ಪ್ರಾರಂಭಿಸಿದನು ಮತ್ತು ಅಂತಿಮವಾಗಿ ತನ್ನ ಸೈನ್ಯಕ್ಕೆ ಹಿಂದಿರುಗುವಿಕೆಯನ್ನು ಘೋಷಿಸಲು ಮತ್ತು ವಿವರಿಸಲು ಎದ್ದುನಿಂತು ಹೀಗೆ ಹೇಳಿದನು: ಓ ಖುರೈಶ್ ಜನರೇ! ನಿಮಗೆ ವಸಂತ ಕಾಲ ಯುದ್ಧಕ್ಕಾಗಿ ಹೆಚ್ಚು ಅನುಯೋಜ್ಯವಾಗಿರುವುದು. ಇದರಿಂದ ನೀವು ಪ್ರಾಣಿಗಳನ್ನು ಮೇಯಿಸಬಹುದು ಮತ್ತು ಹಾಲು ಕುಡಿಯಬಹುದು. ಸದ್ಯ ಬರಗಾಲವಿದೆ. ಹಾಗಾಗಿ ನಾನು ಹಿಂತಿರುಗುತ್ತಿದ್ದೇನೆ, ನೀವೂ ಹಿಂತಿರುಗಿ. ಆದ್ದರಿಂದ ನಾನು ಮರಳಿ ಹೋಗುತ್ತಿದ್ದೇನೆ. ನೀವು ಕೂಡ ಮರಳಿರಿ. ಅಬೂಸುಫ್ಯಾನಿನ ಈ ತೀರ್ಮಾನದ ನಂತರ ಪೂರ್ತಿ ಸೈನ್ಯ ಮರಳಿತು ಮತ್ತು ಯಾವನೂ ಕೂಡ ಈ ತೀರ್ಪನ್ನು ವಿರೋಧಿಸಲಿಲ್ಲ. ಮುಸ್ಲಿಮರೊಡನೆ ಯುದ್ಧ ಮಾಡಲು ಸತ್ಯನಿಷೇಧಿಗಳು ಹೆದರುತ್ತಿದ್ದರು ಎಂದು ಇದರಿಂದ ತಿಳಿದುಬರುತ್ತದೆ. (ಸೀರತ್ ಇನ್ಸೈಕ್ಲೊಪೀಡಿಯಾ, ಸಂಪುಟ–7, ಪುಟ–95–96, ದಾರುಸ್ಸಲಾಮ್ ರಿಯಾದ್ 1435 ಹಿಜರಿ)

ವಾಗ್ದಾನದಂತೆ, ಹಝ್ರತ್ ಪೈಗಂಬರ್(ಸ) ಅವರು ಬದ್ರ್‌ನಲ್ಲಿ ಎಂಟು ದಿನಗಳ ಕಾಲ ಅಬುಸುಫ್ಯಾನ್‌ಗಾಗಿ ಕಾಯುತ್ತಾ ಮದೀನಾಗೆ

ಹಿಂದಿರುಗಿದರು. ಮತ್ತು ಅವರು(ಸ) ಈ ಅಭಿಯಾನಕ್ಕಾಗಿ ಒಟ್ಟು ಹದಿನಾರು ರಾತ್ರಿಗಳ ಕಾಲ ಮದೀನಾದಿಂದ ಹೊರಗಿದ್ದರು. ಶತ್ರುಗಳು ಅವರು(ಸ) ವಿರುದ್ಧ ಬರಲು ಧೈರ್ಯ ಮಾಡಲಿಲ್ಲ. ಅವನಿಗೆ (ಅಬುಸುಫ್ಯಾನ್‌ಗೆ) ಬಹಳ ಅವಮಾನವಾಯಿತು. ಮುಸ್ಲಿಮರ ನೈತಿಕ ಸ್ಥೈರ್ಯ ಹೆಚ್ಚಾಯಿತು. ಆ ಪ್ರದೇಶದ ಕೆಲವು ಸ್ಥಳೀಯ ಅವಿಶ್ವಾಸಿಗಳು ಮಕ್ಕಾದ ಖುರೈಶ್‌ಗಳ ಕಡೆಗೆ ಒಲವು ತೋರುತ್ತಿದ್ದರು. ಹಝ್ರತ್ ಪೈಗಂಬರ್(ಸ) ಅವರಿಗೆ ತಮ್ಮ ದೃಢಸಂಕಲ್ಪವನ್ನು ಅತ್ಯಂತ ಧೈರ್ಯದಿಂದ ಸ್ಪಷ್ಟಪಡಿಸಿದಾಗ ಅವರೂ ಸಹ ನಿಗ್ರಹಿಸಲ್ಪಟ್ಟರು. ಬದ್ರ್‌ನ ಕೆಲವು ವ್ಯಾಪಾರಿಗಳು ಅಲ್ಲಿಂದ ಹೊರಟು ಮಕ್ಕಾಗೆ ಹೋಗಿ ಮುಸ್ಲಿಮರ ಸ್ಥಿರ ಪರಿಸ್ಥಿತಿಯ ವಿವರಗಳನ್ನು ಅಬುಸುಫ್ಯಾನ್‌ಗೆ ತಿಳಿಸಿದರು. ಅಬುಸುಫ್ಯಾನ್ ಮತ್ತು ಅವನ ಸಹಚರರು ತಮ್ಮ ಹೇಡಿತನ ಮತ್ತು ಭರವಸೆಯ ಉಲ್ಲಂಘನೆಯ ಬಗ್ಗೆ ತೀವ್ರವಾಗಿ ನಾಚಿಕೆಪಟ್ಟರು. ಈ ಯುದ್ಧದಲ್ಲಿ ಯಾವುದೇ ಪ್ರಾಯೋಗಿಕ ಯುದ್ಧವಿಲ್ಲದಿದ್ದರೂ, ಮುಸ್ಲಿಮರ ಘನತೆ ಮತ್ತು ವಿಶ್ವಾಸವನ್ನು ಪುನಃಸ್ಥಾಪಿಸಲಾಯಿತು ಮತ್ತು ಶತ್ರುಗಳ ಭಯವು ಬಹಳವಾಗಿ ಹೆಚ್ಚಾಯಿತು.

(ಕಿತಾಬುಲ್ ಮಗಾಝಿ ವಾಖಿದಿ, ಸಂಪುಟ-1, ಪುಟ-324, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 2004) (ದಾಎರಾ ಮುಆರಿಫ್ ಸೀರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್, ಸಂಪುಟ-7, ಪುಟ-248, ಬಜ್ಮ್ ಇಕ್ಬಾಲ್ ಲಾಹೋರ್ 2022)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ಇದರ ಬಗ್ಗೆ ಹೀಗೆ ಬರೆದಿದ್ದಾರೆ, "ಹಝ್ರತ್ ಪೈಗಂಬರ್(ಸ) ಒಂದೂವರೆ ಸಾವಿರ ಸಹಾಬೀಯರೊಂದಿಗೆ ಮದೀನಾವನ್ನು ತೊರೆದರು ಮತ್ತು ಮತ್ತೊಂದೆಡೆ ಅಬುಸುಫ್ಯಾನ್ ತನ್ನ ಎರಡು ಸಾವಿರ ಸೈನಿಕರೊಂದಿಗೆ ಮಕ್ಕಾವನ್ನು ತೊರೆದನು, ಆದರೆ ವಾಗ್ದಾನದಂತೆ ಮುಸ್ಲಿಮರು ಬದರ್ ಮೈದಾನಕ್ಕೆ ತಲುಪಿದರು, ಆದರೆ ಖುರೈಶ್‌ರ ಸೈನ್ಯವು ಸ್ವಲ್ಪ ದೂರ ಬಂದು ನಂತರ ಮಕ್ಕಾಗೆ ಹಿಂದಿರುಗಿತು. ಅದಕ್ಕೆ ಕಾರಣ ಏನಾಯಿತು ಎಂದರೆ ಅಬುಸುಫ್ಯಾನ್‌ಗೆ ನುಐಮ್‌ನ ವೈಫಲ್ಯದ ಬಗ್ಗೆ ತಿಳಿದಾಗ ಅವನು ತನ್ನ ಮನಸ್ಸಿನಲ್ಲಿ ಭಯಭೀತನಾದನು ಮತ್ತು ಅವನು ತನ್ನ ಸೈನ್ಯವನ್ನು ರಸ್ತೆಯಿಂದ ಈ ವರ್ಷ ಬಹಳಷ್ಟು ಕ್ಷಾಮವಿದೆ ಮತ್ತು ಜನರಿಗೆ ಬಹಳ ತೊಂದರೆ ಇದೆ ಆದ್ದರಿಂದ ಈ ಸಂದರ್ಭದಲ್ಲಿ ಯುದ್ಧವಾಡುವುದು ಒಳ್ಳೆಯದಲ್ಲ. ಒಳ್ಳೆಯ ಸಂದರ್ಭ ಒದಗಿ ಬಂದಾಗ ಹೆಚ್ಚಿನ ಸಿದ್ಧತೆಯೊಂದಿಗೆ ಮದೀನಾವನ್ನು ಆಕ್ರಮಿಸೋಣ ಎಂದು ಹಿಂದಕ್ಕೆ ತಿರುಗಿಸಿದನು. ಇಸ್ಲಾಮಿನ ಸೈನ್ಯವು ಎಂಟು ದಿನಗಳ ಕಾಲ ಬದ್ರ್‌ನಲ್ಲಿ ತಂಗಿತು, ಮತ್ತು ಪ್ರತಿ ವರ್ಷ ಝುಖಾಅ್‌ದಃದ ತಿಂಗಳ ಆರಂಭದಲ್ಲಿ ಜಾತ್ರೆ ನಡೆಯುತ್ತಿತ್ತು. ಆ ದಿನಗಳಲ್ಲಿ, ಅನೇಕ ಸಹಾಬೀಯರು ಈ ಜಾತ್ರೆಯಲ್ಲಿ ವ್ಯಾಪಾರ ಮಾಡುವ ಮೂಲಕ ಸಾಕಷ್ಟು ಲಾಭವನ್ನು ಗಳಿಸಿದರು. ಈ ಎಂಟು ದಿನಗಳ ವ್ಯಾಪಾರದಲ್ಲಿ ಅವರೆಲ್ಲರು ತಮ್ಮ ಬಂಡವಾಳವನ್ನು ದ್ವಿಗುಣಗೊಳಿಸಿದರು. ಜಾತ್ರೆ ಮುಗಿಯಿತು ಖುರೈಶ್ ಸೈನ್ಯ ಬರದಿದ್ದಾಗ ಹಝ್ರತ್ ಪೈಗಂಬರ್(ಸ)ರು ಬದ್ರ್ ಬಿಟ್ಟು ಮದೀನಾಗೆ ಹಿಂದಿರುಗಿದರು, ಖುರೈಷಿಗಳು ಮಕ್ಕಾಗೆ ಹಿಂತಿರುಗಿ ಮದೀನದ ಮೇಲೆ ದಾಳಿ ಮಾಡಲು ಸಿದ್ಧತೆಗಳನ್ನು ಪ್ರಾರಂಭಿಸಿದರು."

(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ 529-530)

ಈಗ ಮತ್ತೊಮ್ಮೆ ಖುರೈಷಿಗಳು ಹಿಂದಿರುಗಿ ಅವಮಾನವನ್ನು ತೊಡೆದುಹಾಕಲು ಮತ್ತು ಮುಸ್ಲಿಮರಿಗೆ ಹಾನಿ ಮಾಡಲು ಯುದ್ಧದ ಸಿದ್ಧತೆಗಳನ್ನು ಪ್ರಾರಂಭಿಸಿದರು. ಆದಾಗ್ಯೂ, ಇದು ಈ ಯುದ್ಧದ ಅಂತ್ಯವಾಗಿತ್ತು.

ಎರಡನೆಯ ಯುದ್ಧ ದುಮತುಲ್ ಜಂದಲ್ ಆಗಿದೆ. ಇದು ರಬೀ ಉಲ್-ಅವ್ವಲ್ ಹಿಜ್ರಿ 5 ರಲ್ಲಿ ನಡೆಯಿತು. ದುಮತುಲ್ ಜಂದಲ್ ಮದೀನಾದಿಂದ ಸುಮಾರು ನಾನೂರೈವತ್ತು ಕಿಲೋಮೀಟರ್ ದೂರದಲ್ಲಿದೆ. ಪ್ರಾಚೀನ ಕಾಲದಲ್ಲಿ, ಈ ಪ್ರಯಾಣವು ಸುಮಾರು ಹದಿನೈದು ಅಥವಾ ಹದಿನೇಳು ದಿನಗಳಲ್ಲಿ ಪೂರ್ಣಗೊಳಿಸಲಾಘುತ್ತಿತ್ತು. ಇದು ಮದೀನದ ಉತ್ತರಕ್ಕೆ ಸೀರಿಯಾದ ಗಡಿಗೆ ಸಮೀಪವಿರುವ ಸ್ಥಳವಾಗಿತ್ತು. ಬನೂ ಖುಝಾಅ ಗೋತ್ರದ ಶಾಖೆಯಾದ ಬನು ಕಲ್ಬ್‌ನ ಜನರು ಇಲ್ಲಿ ವಾಸಿಸುತ್ತಿದ್ದರು. ಬನು ಕಲ್ಬ್ ನಿರ್ವಹಿಸುತ್ತಿದ್ದ ಈ ಸ್ಥಳದಲ್ಲಿ ಬೃಹತ್ ವಾಣಿಜ್ಯ ಮಾರುಕಟ್ಟೆ ಇತ್ತು. (ದಾಎರಾ ಮುಆರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ-7, ಪುಟ-249, ಬಝ್ಮ್ ಇಖ್ಬಾಲ್ ಲಾಹೋರ್ 2022)

ದುಮತುಲ್ ಜಂದಲ್‌ನ ಎಂಬ ಹೆಸರಿಗೆ ಕಾರಣವೇನು? ಅಲ್ಲಿ ಒಂದು ವಿಶೇಷ ರೀತಿಯ ಕಲ್ಲಿನಿಂದ ನಿರ್ಮಿಸಲಾದ ಕೋಟೆ ಇತ್ತು. ದುಮ ಪ್ರವಾಹ ತೆರೆಯಿಂದಾಗಿ ದುಂಡಗಿನ ಕಲ್ಲುಗಳು ಗಮನಾರ್ಹ ಪ್ರಮಾಣದಲ್ಲಿ ಸಂಗ್ರಹವಾಗುವ ಸ್ಥಳಕ್ಕೆ ದಲ್ಲಿ ದುಮ ಎಂಬ ಪದವನ್ನು ಸಹ ಹೇಳಲಾಗುತ್ತದೆ. ಈ ಸ್ಥಳವನ್ನು ದುಮ ಎಂದು ಕರೆಯಲು ಕಾರಣವೆಂದರೆ ಇದು ಹಝ್ರತ್ ಇಸ್ಮಾಯಿಲ್ ಅಲೈಹಿಸ್ಸಲಾಮ್ ಅವರ ಇಬ್ಬರು ಪುತ್ರರಾದ ದುಮ ಅಥವಾ ದುಮಾನ್‌ಗೆ ಕಾರಣವಾಗಿದೆ. ಆದಾಗ್ಯೂ, ಇದು ಅದರ ಹೆಸರಿಗೆ ಕಾರಣವಾಗಿದೆ. ಈ ಯುದ್ಧದ ದಿನಾಂಕ ಮತ್ತು ಸೈನ್ಯದ ಸಂಖ್ಯೆಯ ಬಗ್ಗೆ, ಎಲ್ಲಾ ಇತಿಹಾಸಕಾರರು ಮತ್ತು ಜೀವನಚರಿತ್ರೆಕಾರರ ಪ್ರಕಾರ, ಈ ಯುದ್ಧವು ಹಿಜ್ರಿ 5 ರ ರಬಿ-ಉಲ್-ಅವ್ವಲ್ನ ಇಪ್ಪತ್ತೈದನೇ ತಾರೀಖಿನಂದು ನಡೆಯಿತು ಎಂದು ಬರೆಯಲಾಗಿದೆ.

(ದಾಎರಾ ಮಾರಿಫ್, ಸೀರತ್ ಮುಹಮ್ಮದ್ ರಸೂಲುಲ್ಲಾ(ಸ), ಸಂಪುಟ-7, ಪುಟಗಳು 249-250, ಬಿಜ್ಮ್ ಇಕ್ಬಾಲ್, ಲಾಹೋರ್, 2022)

ಇದಕ್ಕೆ ಕಾರಣವೇನು? ಇದರ ಬಗ್ಗೆ ಹೀಗೆ ಬರೆಯಲಾಗಿದೆ: ಇಲ್ಲಿಯವರೆಗೆ ವಿರೋಧಿಗಳ ವಿರುದ್ಧದ ಯುದ್ಧ ಕಾರ್ಯಾಚರಣೆಗಳು ಹೆಚ್ಚು ಕಡಿಮೆ ಮದೀನಾ ಮತ್ತು ಹಿಜಾಝ್ ಪ್ರದೇಶಕ್ಕೆ ಸೀಮಿತವಾಗಿತ್ತು ಮತ್ತು ಈ ಪ್ರದೇಶ ಮದೀನದಿಂದ 450 ಕಿಲೋಮೀಟರ್ ದೂರದಲ್ಲಿತ್ತು. ಆ ಕಾಲದಲ್ಲಿ ಈ ಯಾತ್ರೆ 15ರಿಂದ 17 ದಿನಗಳಲ್ಲಿ ಪೂರ್ತಿಯಾಗುತ್ತಿತ್ತು. ಇದು ಮದೀನದಿಂದ ದೂರದಲ್ಲಿ ರೋಮನ್ ಆಡಳಿತದ ಸಿರಿಯಾ ದೇಶದ ಗಡಿಪ್ರದೇಶಗಳ ಸಮೀಪ ನಡೆಯುತ್ತಿರುವ ಮೊದಲ ಕಾರ್ಯಾಚರಣೆಯಾಗಿತ್ತು. ಇದರ ಹಿನ್ನೆಲೆಯೇನೆಂದರೆ, ಮುಸ್ಲಿಮರ ಕೈಗಳಿಂದ ಪದೇ ಪದೇ ಸೋಲನ್ನು ಅನುಭವಿಸಿದ ಕಾರಣದಿಂದ ಮತ್ತು ಮುಸ್ಲಿಮರ ಪ್ರತಾಪ ವರ್ಧಿಸುತ್ತಿರುವುದನ್ನು ಅರಿತುಕೊಂಡು ಮುಸ್ಲಿಮರನ್ನು ಮತ್ತು ಇಸ್ಲಾಮನ್ನು ಬೇರು ಸಹಿತ ಕಿತ್ತು ಹಾಕಲು ದೀನಿನ ಶತ್ರುಗಳು ಯಾವುದಾದರೂ ಸಂದರ್ಭವನ್ನು ಹುಡುಕುತ್ತಿದ್ದರು. ಇದನ್ನು ಕಾರ್ಯಗತಗೊಳಿಸಲಿಕ್ಕಾಗಿ ಮದೀನದ ಉತ್ತರ ದಿಕ್ಕಿನ ಎಲ್ಲೆಯಲ್ಲಿ ಸಿರಿಯದ ಗಡಿಪ್ರದೇಶದ ಸಮೀಪ ದೌಮತುಲ್ ಜಂದಲಿನ ಸುತ್ತ ಆ ಗೋತ್ರಗಳು ಇಸ್ಲಾಮಿನ ಆಡಳಿತವನ್ನು ಎದುರಿಸಲಿಕ್ಕಾಗಿ ಒಂದು ದೊಡ್ಡ ಸೈನ್ಯವನ್ನು ತಯಾರು ಮಾಡಲು ಆರಂಭಿಸಿದರು. ಈ ಜನರು ಪಿತೂರಿ ಉಂಟುಮಾಡುತ್ತಾ ವ್ಯಾಪಾರ ತಂಡಗಳನ್ನು ಲೂಟಿ ಮಾಡುತ್ತಿದ್ದರು. ಹಝ್ರತ್ ಪೈಗಂಬರ್(ಸ)ರಿಗೆ ಈ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಲಭಿಸಿದಾಗ, ದೌಮತುಲ್ ಜಂದಲಿನ ಗೋತ್ರಗಳು ಯಾವುದಾದರೂ ದೊಡ್ಡ ಸೇನೆಯೊಂದಿಗೆ ಮದೀನದ ಮೇಲೆ ದಾಳಿ ನಡೆಸುವುದಕ್ಕೆ ಮುಂಚಿತವಾಗಿ ಅವರ ಪ್ರದೇಶಕ್ಕೆ ತಲುಪಿ ಅವರನ್ನು ಮದೀನದ ಮೇಲೆ ದಾಳಿ ನಡೆಸುವುದರಿಂದ ತಡೆಯುವುದಕ್ಕಾಗಿ ಮತ್ತು ವ್ಯಾಪಾರದ ತಂಡಗಳು ಸುರಕ್ಷಿತವಾಗಿ ಸಿರಿಯಗೆ ತಲುಪುವಂತೆ ಆಗಲು ಅವರನ್ನು ಚದುರಿಸುವುದು ಉತ್ತಮವೆಂದು ತೀರ್ಮಾನಿಸಲಾಯಿತು. (ಗಝ್ವಾತ್ ವ ಸರಯಾ, ಪುಟ 244-245, ಫರೀದಿಯಾ ಪಬ್ಲಿಷರ್ಸ್ ಸಾಹಿವಾಲ್ 2018)

ಅದರ ಸಿದ್ಧತೆಯ ಬಗ್ಗೆ ಹೀಗೆ ಬರೆಯಲಾಗಿದೆ: ಹಝ್ರತ್ ಪೈಗಂಬರ್(ಸ) ಸೈನ್ಯವನ್ನು ಸಿದ್ಧಪಡಿಸಿ ಜನರನ್ನು ತೊರೆಯಲು ಆದೇಶಿಸಿದರು ಮತ್ತು ಹಝ್ರತ್ ಸಿಬಾ ಬಿನ್ ಉರ್ಫುತಾ ಘಿಫಾರಿ(ರ) ಅವರನ್ನು ಮದೀನಾದಲ್ಲಿ ತಮ್ಮ ಉಪನಾಯಕರಾಗಿ ನೇಮಿಸಿದರು ಮತ್ತು ಹಝ್ರತ್ ಪೈಗಂಬರ್(ಸ) ಅವರು ಒಂದು ಸಾವಿರ ಸಹಾಬೀಯರ ಸೈನ್ಯವನ್ನು ತೆಗೆದುಕೊಂಡು ಹೊರಟರು. ಹಝ್ರತ್ ಪೈಗಂಬರ್(ಸ)ರು ರಾತ್ರಿಯಲ್ಲಿ ಪ್ರಯಾಣಿಸುತ್ತಿದ್ದರು ಮತ್ತು ಹಗಲಿನಲ್ಲಿ ಮರೆಯಾಗುತ್ತಿದ್ದರು. ದಾರಿ ತೋರಿಸಲು ಬನು ಉಝ್ರಾಹ್‌ನ ವ್ಯಕ್ತಿಯೊಬ್ಬನು ಅವರೊಂದಿಗೆ ಇದ್ದನು. ಅವನ ಹೆಸರು ಮಝ್ಕೂರ್ ಎಂದಾಗಿತ್ತು. ಅವನು ಪರಿಣಿತ ಮಾರ್ಗದರ್ಶಕನಾಗಿದ್ದನು. ಅವನು ಬಹಳ ವೇಗವಾಗಿ ಹೊರಟು ಶತ್ರುಗಳ ಅರಿವಿಗೆ ಬಾರದಂತೆ ಅಪರಿಚಿತ ಮಾರ್ಗದಲ್ಲಿ ಪ್ರಯಾಣ ಬೆಳೆಸಿದನು. ಹಝ್ರತ್ ಪೈಗಂಬರ್(ಸ) ದುಮತುಲ್ ಜಂದಲ್ ಅನ್ನು ಸಮೀಪ ತಲುಪಿದಾಗ ಮಾರ್ಗದರ್ಶಿ ಹೇಳಿದನು: ಇದು ಬನು ತಮೀಮ್‌ರ ಹುಲ್ಲುಗಾವಲಾಗಿದೆ. ಅವರ ಒಂಟೆಗಳು ಮತ್ತು ದನಗಳು ಇಲ್ಲಿವೆ. ನೀವು(ಸ) ಇಲ್ಲೇ ಇರಿ ನಾನು ಹೋಗಿ ಮಾಹಿತಿ ತರುತ್ತೇನೆ. ಅದಕ್ಕೆ ಹಝ್ರತ್ ಪೈಗಂಬರ್(ಸ)ರು ಹೇಳಿದರು: ಸರಿ, ಆದ್ದರಿಂದ ಉಝ್ರಿ ಒಬ್ಬನೇ ಹೋಗಿ ವಿಚಾರಿಸಿದಾಗ ಅಲ್ಲಿ ಜಾನುವಾರು ಮತ್ತು ಮೇಕೆಗಳ ಕುರುಹುಗಳು ಮತ್ತು ಅವು ತಮ್ಮ ಆಶ್ರಯದಲ್ಲಿ ಅಡಗಿಕೊಂಡಿರುವುದು ಕಂಡುಬಂದಿತು. ನಂತರ ಅವನು ಹಝ್ರತ್ ಪೈಗಂಬರ್(ಸ)ರ ಬಳಿಗೆ ಹಿಂತಿರುಗಿ ಅವನು ಅವರ ಸ್ಥಳಗಳನ್ನು ಗುರುತಿಸಿದ್ದಾನೆ ಎಂದು ತಿಳಿಸಿದನು. ಹಝ್ರತ್ ಪೈಗಂಬರ್(ಸ) ಅವರು ಅಲ್ಲಿಂದ ಹೊರಟ ಅವರ ಪ್ರಾಣಿಗಳು ಮತ್ತು ಕುರಿಗಾಹಿಗಳ ಮೇಲೆ ದಾಳಿ ಮಾಡಿದರು ಮತ್ತು ಅವುಗಳಲ್ಲಿ ಕೆಲವನ್ನು ಸೆರೆಹಿಡಿದರು ಮತ್ತು ಉಳಿದವುಗಳು ಓಡಿಹೋಯಿತು. ಅಲ್ಲಿ ಅಡಗಿ ಕುಳಿತಿದ್ದ, ಯುದ್ಧಕ್ಕೆ ತಯಾರಿ ನಡೆಸುತ್ತಿದ್ದ ದುಮತುಲ್-ಜಂದಲ್ ನ ಜನರು ಚದುರಿ ಹೋದರು.

ಮತ್ತು ಹಝ್ರತ್ ಪೈಗಂಬರ್(ಸ) ಅವರು ಅವರ ಮೈದಾನದಲ್ಲಿ ಬೀಡುಬಿಟ್ಟರು. ಹಝ್ರತ್ ಪೈಗಂಬರ್(ಸ) ಕೆಲವು ದಿನಗಳ ಕಾಲ ಅಲ್ಲಿಯೇ ಇದ್ದು ವಿವಿಧ ಗುಂಪುಗಳನ್ನು ಸುತ್ತಲೂ ಕಳುಹಿಸಿದರು. ಇಸ್ಲಾಮಿನ ಪಡೆಗಳು ಸುರಕ್ಷಿತವಾಗಿ ಹಝ್ರತ್ ಪೈಗಂಬರ್(ಸ)ರ ಬಳಿಗೆ ಮರಳಿದವು. ಪ್ರತಿಯೊಂದು ಗುಂಪು ಕೆಲವು ಒಂಟೆಗಳನ್ನು ತಂದರು ಆದರೆ ಅವರಿಗೆ ಯಾವ ಪುರುಷನು ಕಾಣಲಿಲ್ಲ. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮಾ ಮಾತ್ರ ಅವರಲ್ಲಿ ಒಬ್ಬನನ್ನು ಹಿಡಿದು ಹಝ್ರತ್ ಪೈಗಂಬರ್(ಸ)ರ ಬಳಿಗೆ ಕರೆತಂದರು. ಹಝ್ರತ್ ಪೈಗಂಬರ್(ಸ) ಆತನ ಸಹಚರರ ಬಗ್ಗೆ ಕೇಳಿದಾಗ ಅವನು ಹೀಗೆ ಹೇಳಿದನು: ಕಳೆದ ರಾತ್ರಿ ಹಝ್ರತ್ ಪೈಗಂಬರ್(ಸ) ಅವರ ಪ್ರಾಣಿಗಳನ್ನು ಸೆರೆಹಿಡಿದಿದ್ದಾರೆ ಎಂದು ಕೇಳಿದಾಗ ಅವರೆಲ್ಲರು ಓಡಿಹೋದರು. ಹಝ್ರತ್ ಪೈಗಂಬರ್(ಸ) ಅವರನ್ನು ಇಸ್ಲಾಮ್ ಧರ್ಮಕ್ಕೆ ಆಹ್ವಾನಿಸಿದಾಗ ಅವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿ ಮುಸ್ಲಿಂ ಆದರು. (ಸಬ್ಲುಲ್ ಹುದಾ ವರ್-ರಶಾದ್, ಸಂಪುಟ 4, ಪುಟ 342, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, 1993) (ಸೀರತ್ ಎನ್‌ಸೈಕ್ಲೋಪೀಡಿಯಾ, ಸಂಪುಟ 7, ಪುಟಗಳು 138–140, ದಾರ್ ಅಲ್-ಸಲಾಮ್ ರಿಯಾದ್, 1435 ಹಿಜರಿ)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ದುಮತುಲ್-ಜಂದಲ್ ಯುದ್ಧ ಬಗ್ಗೆ ಬರೆಯುತ್ತಾರೆ: ದುಮತುಲ್-ಜಂದಲ್ ಸೀರಿಯಾದ ಗಡಿಯ ಸಮೀಪದಲ್ಲಿದೆ ಮತ್ತು ಮದೀನಾದಿಂದ ಅದರ ದೂರವು 15 ರಿಂದ 16 ದಿನಗಳಿಗಿಂತ ಕಡಿಮೆಯಿಲ್ಲ. ಈ ಯುದ್ಧ ಕಾರಣವೇನೆಂದರೆ: ಹಝ್ರತ್ ಪೈಗಂಬರ್(ಸ) ದುಮತುಲ್-ಜಂದಲ್‌ನಲ್ಲಿ ಅನೇಕ ಜನರು ಸೇರುತ್ತಿದ್ದಾರೆ ಮತ್ತು ಅವರು ಪ್ರಯಾಣಿಕರಿಗೆ ಅಥವಾ ವ್ಯಾಪಾರ ತಂಡ ಇತ್ಯಾದಿಗಳನ್ನು ಲೂಟಿ ಮಾಡಿ ದಾಳಿ ಮಾಡುತ್ತಿದ್ದಾರೆ ಎಂಬ ಮಾಹಿತಿಯನ್ನು ಪಡೆದರು. ಮತ್ತು ಅದೇ ಸಮಯದಲ್ಲಿ, ಈ ಜನರು ಮದೀನಕ್ಕೆ ತಿರುಗಿ ಮುಸ್ಲಿಮರಿಗೆ ತೊಂದರೆ ಕೊಡಬಹುದು ಎಂಬ ಆತಂಕವೂ ಇತ್ತು. ಹಝ್ರತ್ ಪೈಗಂಬರ್(ಸ) ರ ಯುದ್ಧ ಕಾರ್ಯಾಚರಣೆಗಳ ಮುಖ್ಯ ಉದ್ದೇಶವೆಂದರೆ ಶಾಂತಿ ಸ್ಥಾಪನೆಯಾಗಿರುವುದರಿಂದ," ಅವರ ಯುದ್ಧ ಕಾರ್ಯಾಚರಣೆಗಳ ಮುಖ್ಯ ಉದ್ದೇಶವು ಶಾಂತಿ ಸ್ಥಾಪನೆಯಾಗಿತ್ತು. "ಆದ್ದರಿಂದ, ಅವರ ಈ ಲೂಟಿ ಹಾಗೂ ದರೋಡೆಯಿಮದ ಮುಸಲ್ಮಾನರಿಗೆ ಯಾವುದೇ ತೊಂದರೆ ಇಲ್ಲದಿದ್ದರು ಈ ಸರಣಿ ದರೋಡೆ ಮತ್ತು ಕ್ರೌರ್ಯವನ್ನು ತಡೆಯಲು ಹಝ್ರತ್ ಪೈಗಂಬರ್(ಸ) ಅವರು ಅಲ್ಲಿಗೆ ಹೋಗಬೇಕೆಂದು ತಮ್ಮ ಸಹಾಬೀಯರನ್ನು ಪ್ರೇರೇಪಿಸಿದರು. ಆದ್ದರಿಂದ, ಹಝ್ರತ್ ಪೈಗಂಬರ್(ಸ) ಅವರ ಉಪಕ್ರಮದ ಮೇರೆಗೆ, ಒಂದು ಸಾವಿರ ಸಹಾಬೀಯರು ಅವರೊಂದಿಗೆ ಇರಲು ಈ ಸುದೀರ್ಘ ಮತ್ತು ನೋವಿನ ಪ್ರಯಾಣವನ್ನು ಕೈಗೊಂಡರು. ಮತ್ತು ಅವರು(ಸ) ಹಿಜ್ರತ್ತಿನ ಐದನೇ ವರ್ಷದಲ್ಲಿ ರಬಿ ಅಲ್-ಅವ್ವಲ್ ತಿಂಗಳಿನಲ್ಲಿ ಮದೀನಾದಿಂದ ಹೊರಟರು ಮತ್ತು ಹದಿನೈದರಿಂದ ಹದಿನಾರು ದಿನಗಳ ಸುದೀರ್ಘ ಮತ್ತು ಕಠಿಣ ಪ್ರಯಾಣದ ನಂತರ ಅವರು ದುಮತುಲ್-ಜಂದಲ್ ಬಳಿ ತಲುಪಿದರು. ಮುಸ್ಲಿಮರು ಬರುವುದರ ಬಗ್ಗೆ ಮಾಹಿತಿ ಲಭಿಸಿ ಆ ಜನರು ಚದುರಿ ಹೋದರು ಎಂದು ಅಲ್ಲಿಗೆ ತಲುಪಿದಾಗ ತಿಳಿದುಬಂತು. ಆದಾಗ್ಯೂ ಹಝ್ರತ್ ಪೈಗಂಬರ್(ಸ) ಅಲ್ಲಿ ಸ್ವಲ್ಪ ದಿನಗಳು ತಂಗಿದರು ಮತ್ತು ಸಣ್ಣ ಸಣ್ಣ ತುಕಡಿಗಳನ್ನು ವಿವಿಧ ಕಡೆಗಳಿಗೆ ಕಳುಹಿಸಿದರು. ಆದರೆ ಯಾವುದೇ ಸುಳಿವು ಸಿಗದ ರೀತಿಯಲ್ಲಿ ಆ ಜನರು ಕಾಣೆಯಾಗಿದ್ದರು. ಆದಾಗ್ಯೂ, ಅವರ ಕುರುಬರಲ್ಲಿ ಒಬ್ಬನು ಮುಸ್ಲಿಮರಿಂದ ಸೆರೆಹಿಡಿಯಲ್ಪಟ್ಟನು ಮತ್ತು ಹಝ್ರತ್ ಪೈಗಂಬರ್(ಸ) ಅವರ ಉಪದೇಶದ ಮೂಲಕ ಮುಸಲ್ಮಾನನಾದನು ಮತ್ತು ಕೆಲವು ದಿನಗಳ ನಂತರ ಅವರು(ಸ) ಮದೀನಾಗೆ ಹಿಂದಿರುಗಿದರು. (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ 540, 541)

ದುಮತುಲ್ ಜಂದಲ್‌ನಿಂದ ಮರಳುವಿಕೆಯ ಬಗ್ಗೆ ಹೀಗೆ ಬರೆಯಲಾಗಿದೆ: ಹಝ್ರತ್ ಪೈಗಂಬರ್(ಸ) ಅಲ್ಲಿ ಮೂರು ದಿನಗಳು ತಂಗಿದ ನಂತರ ಪೂರ್ತಿ ಸೈನ್ಯದೊಂದಿಗೆ ಮದೀನದ ಕಡೆಗೆ ಹೊರಟು ರಬೀಉಲ್ ಸಾನಿ ಇಪ್ಪತ್ತರಂದು ಮದೀನ ತಲುಪಿದರು.

(ಸಬ್ಲುಲ್ ಹುದಾ ವರ್ರಶ್ಶಾದ್, ಸಂಪುಟ-4, ಪುಟ-342, ದಾರುಲ್ ಕುತುಬ್ ಇಲ್‌ಮಿಯ ಬೈರುತ್ 1993) (ದಾಎರಾ ಮುಆರಿಫ್ ಸೀರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್, ಸಂಪುಟ-7, ಪುಟ-251, ಬಝ್ಮ್ ಇಖ್ಬಾಲ್ ಲಾಹೋರ್)

ಓರ್ವ ಲೇಖಕರು, ದುಮತುಲ್ ಜಂದಲ್ ಯುದ್ಧದ ಉದ್ದೇಶಗಳನ್ನು ಉಲ್ಲೇಖಿಸುವಾಗ ಹೀಗೆ ಬರೆದಿದ್ದಾರೆ: ಹಝ್ರತ್ ಪೈಗಂಬರ್(ಸ) ಅವರ ಮುಂದೆ ಈ ಯುದ್ಧಕ್ಕೆ ಹಲವಾರು ಉದ್ದೇಶಗಳಿದ್ದವು. ಇದು ಸ್ವತಃ ಯುದ್ಧವಿರಲಿಲ್ಲ ಬದಲಿಗೆ ಅರೇಬಿಯನ್ ದ್ವೀಪದ ಉತ್ತರದ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ಇದು ಅವಕಾಶವನ್ನು ಒದಗಿಸಿತು. ಅರೇಬಿಯ ದ್ವೀಪದಲ್ಲಿ ಅಧಿಕಾರದ ಮುಖ್ಯ ಕೇಂದ್ರಗಳ ಆವಿಷ್ಕಾರವು ಅವರ ಉದ್ದೇಶಗಳಲ್ಲಿ ಒಂದಾಗಿತ್ತು. ಇದರೊಂದಿಗೆ, ಈ ಯುದ್ಧ ಅದರ ಫಲಿತಾಂಶ ಮತ್ತು ಪರಿಣಾಮದ ದೃಷ್ಟಿಯಲ್ಲಿ ಬಹಳ ಉಪಯುಕ್ತವಾಗಿತ್ತು. ಈ ಯುದ್ಧದ ಮೂಲಕ ಮುಸ್ಲಿಮರಿಗೆ ಪೂರ್ತಿ ಪ್ರದೇಶದ ಪರಿಚಯ ಉಂಟಾಯಿತು. ಪೂರ್ತಿ ಪ್ರದೇಶದ ಅರಿವು ಉಂಟಾಗುವುದು ಯಾತ್ರೆಯ ಒಂದು ಉದ್ದೇಶ ಸಹ ಆಗಿತ್ತು. ಆದಾಗ್ಯೂ, ನಿಜವಾಗಿ ನಡೆಯದ ಈ ಯುದ್ಧವು ಅಲ್ಲಾಹನ ದಯೆಯಿಂದ ಮುಸ್ಲಿಮರ ಭವಿಷ್ಯದ ವಿಜಯ ಮತ್ತು ಬೆಂಬಲದ ಫಲಿತಾಂಶಗಳನ್ನು ಸುತ್ತುವರಿಯುತ್ತಿತ್ತು ಎಂದು ಅವನು ಬರೆಯುತ್ತಾನೆ. ಇದು ಸೈನ್ಯ ಕಾರ್ಯಾಚರಣೆಯಾಗಿದ್ದು ಅದು ಭವಿಷ್ಯದ ಸಂಭವನೀಯ ಯುದ್ಧಕ್ಕೆ ಮುನ್ನುಡಿಯಾಗಿತ್ತು. ವಾಸ್ತವದಲ್ಲಿ, ಆ ಪ್ರದೇಶದಲ್ಲಿನ ಅನೇಕ ಅರಬ್ ಗೋತ್ರಗಳು ಮದೀನಾದ ಮೇಲೆ ಅಕ್ರಮಣ ನಡೆಸಲು ಉದ್ದೇಶಿಸಿದ್ದರಿಂದ, ಈ ಕ್ರಮವು ಯುದ್ಧದ ಸಾಧ್ಯತೆಯನ್ನು ತಡೆಗಟ್ಟಲು ಆಗಿತ್ತು. ಅದಲ್ಲದೆ, ಉಹುದ್ ಯುದ್ಧದಲ್ಲಿ ಮುಸಲ್ಮಾನರ ತಾತ್ಕಾಲಿಕ ಸೋಲಿನ ಲಾಭ ಪಡೆದು ಮದೀನಾಗೆ ನುಗ್ಗುವ ಕನಸು ಕಾಣುತ್ತಿದ್ದ ಆ ಗೋತ್ರಗಳ ಸಂಭವನೀಯ ಆಕ್ರಮಣವನ್ನು ತಡೆಯುವ ರಾಜಕೀಯ ಯುದ್ಧವೂ ಆಗಿತ್ತು. ರೋಮನ್ ಸಾಮ್ರಾಜ್ಯದ ವಿರುದ್ಧ ಎಂದಿಗೂ ಹೋರಾಡಲು ಸಾಧ್ಯವಾಗದ ಅರಬ್ಬರ ಮಾನಸಿಕ ಪ್ರಭಾವವನ್ನು ತೆಗೆದುಹಾಕುವುದು ಈ ಯುದ್ಧದ ಗುರಿಗಳಲ್ಲಿ ಒಂದಾಗಿತ್ತು. ಒಂದೇ ಅಲ್ಲ ಬದಲಿಗೆ ರೋಮನ್ ಸಾಮ್ರಾಜ್ಯದೊಂದಿಗೆ ನಾವು ಎಂದಿಗೂ ಸ್ಪರ್ಧಿಸಲು ಸಾಧ್ಯವಿಲ್ಲ ಎಂದು ಅರಬ್ಬರ ಮೇಲೆ ಸ್ಥಾಪಿಸಲಾದ ಮಾನಸಿಕ ಪರಿಣಾಮವನ್ನು ಸಹ ಈ ಕ್ರಮದಿಂದ ತೆಗೆದುಹಾಕಲಾಯಿತು. ಅವರ ಸಂದೇಶವು ಸಾರ್ವತ್ರಿಕವಾಗಿದೆ ಮತ್ತು ಅರೇಬಿಯಾಗೆ ಸೀಮಿತವಾಗಿಲ್ಲ ಎಂದು ಪ್ರಾಯೋಗಿಕವಾಗಿ ಅವರಿಗೆ ಭರವಸೆ ನೀಡಲು ಉದ್ದೇಶಿಸಲಾಗಿತ್ತು. ಈ ಕ್ರಮ ಮುಸಲ್ಮಾನರಿಗೂ ಈ ಸಮಾಧಾನ ನೀಡಿದೆ. ಈ ಹಠಾತ್ ಮತ್ತು ನಿರ್ಣಾಯಕ ಕ್ರಮಗಳು ಮತ್ತು ಬುದ್ಧಿವಂತ ಯೋಜನೆಗಳ ಮೂಲಕ, ಹಝ್ರತ್ ಪೈಗಂಬರ್(ಸ) ಅವರು ಇಸ್ಲಾಮಿನ ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಪುನಃಸ್ಥಾಪಿಸಲು ಮತ್ತು ಪರಿಸ್ಥಿತಿಯನ್ನು ನಿಯಂತ್ರಿಸುವಲ್ಲಿ ಮತ್ತು ಮುಸ್ಲಿಮರ ಪರವಾಗಿ ಸಮಯದ ಅಲೆಯನ್ನು ತಿರುಗಿಸುವಲ್ಲಿ ಯಶಸ್ವಿಯಾದರು ಮತ್ತು ಇದು ಎಲ್ಲಾ ಕಡೆಯಿಂದ ನಿರಂತರ ಅವರನ್ನು ಆವರಿಸಿದ ಆಂತರಿಕ ಮತ್ತು ಬಾಹ್ಯ ತೊಂದರೆಗಳ ತೀವ್ರತೆಯನ್ನು ಕಡಿಮೆಗೊಳಿಸಿತು. ವಿರೋಧಿಗಳಾಗಿದ್ದ ಅನೇಕ ಜನರು ಈ ಕ್ರಮದಿಂದ ದೂರವಿದ್ದರು. ಆಂತರಿಕವಾಗಿ ಕಪಟಿಗಳು ಕೂಡ ಅದರಿಂದ ದೂರವಿರುವುದರಿಂದ ಕಪಟಿಗಳು ನಿರಾಶೆಯಿಂದ ಮೌನವಾಗಿ ಕುಳಿತಿದ್ದರು. ಅರೇಬಿಯಾ ಅನಾಗರೀಕ ಜನರನ್ನು ಸಡಿಲಗೊಳಿಸಲಾಯಿತು ಮತ್ತು ಮುಸ್ಲಿಮರಿಗೆ ಇಸ್ಲಾಂ ಧರ್ಮವನ್ನು ಹರಡಲು ಮತ್ತು ಪ್ರಪಂಚದ ಭಗವಂತನ ಸಂದೇಶವನ್ನು ಬೋಧಿಸಲು ಅವಕಾಶವನ್ನು ಪಡೆದರು.

(ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ-7, ಪುಟ-140, ದಾರುಸ್ಸಲಾಮ್ ರಿಯಾದ್ 1435 ಹಿಜರಿ)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಯ ಬಗ್ಗೆ ಆಳವಾದ ಸಂಶೋಧನೆಯನ್ನು ಹೊಂದಿದ್ದರು ಅವರು ಈ ಬಗ್ಗೆ ಬರೆಯುತ್ತಾರೆ: "ಈ ಯುದ್ಧವು ಮೊದಲ ಯುದ್ಧವಾಗಿದ್ದು, ಅದರ ಉದ್ದೇಶ ಅಥವಾ ಕನಿಷ್ಠ ಮುಖ್ಯ ಉದ್ದೇಶವು ದೇಶದಲ್ಲಿ ಶಾಂತಿ ಸ್ಥಾಪಿಸುವುದಾಗಿತ್ತು."

ದುಮದ ಜನರು ಮುಸ್ಲಿಮರೊಂದಿಗೆ ಯಾವುದೇ ಜಗಳವನ್ನು ಹೊಂದಿರಲಿಲ್ಲ. ಅವರು ಮದೀನಾದಿಂದ ತುಂಬಾ ದೂರದಲ್ಲಿದ್ದರು, ಅವರು ಇಂತಹ ದೀರ್ಘ ಪ್ರಯಾಣದ ಕಷ್ಟಗಳನ್ನು ಸಹಿಸಿಕೊಂಡು ಮದೀನಾದಲ್ಲಿನ ಮುಸ್ಲಿಮರಿಗೆ ತೊಂದರೆ ಉಂಟುಮಾಡುತ್ತಾರೆ ಎಂದು ಅವರ ಕಡೆಯಿಂದ ನಿಜವಾದ ಅಪಾಯವಿರಲಿಲ್ಲ. ಅವರು ತಮ್ಮ ಪ್ರದೇಶದಲ್ಲಿ ಲೂಟಿ ಮಾಡುವುದನ್ನು ಮತ್ತು ಮುಗ್ಧ ವ್ಯಾಪಾರ ತಂಡಗಳು ಮತ್ತು ಪ್ರಯಾಣಿಕರಿಗೆ ಕಿರುಕುಳ ನೀಡುವುದನ್ನು ಮುಂದುವರಿಸಿದ್ದರು ಅವರನ್ನು ಆ ಲೂಟಿಗಳಿಂದ ತಡೆಯುವುದು ಅತ್ಯವಶ್ಯಕವಾಗಿತ್ತು ಆದ್ದರಿಂದ, ಅವರನ್ನು ಎದುರಿಸಲು 15 ರಿಂದ 16 ದಿನಗಳ ತೊಂದರೆಗಳ ಪ್ರಯಾಣವನ್ನು ಕೈಗೊಂಡರು. ಅದರ ಹೊರತಾಗಿ ಬೇರೆ ಯಾವುದೇ ಉದ್ದೇಶವಿರಲಿಲ್ಲ. ಹಾಗಾಗಿ ಮುಸಲ್ಮಾನರ ಈ ಯಾತ್ರೆಯು ಕೇವಲ ಸಾಮಾನ್ಯ ಕಲ್ಯಾಣಕ್ಕಾಗಿ ಮತ್ತು ಅವರ ಸ್ವಂತ ಆಸಕ್ತಿಯನ್ನು ಹೊಂದಿರದ ದೇಶದ ಒಟ್ಟಾರೆ ಕಲ್ಯಾಣಕ್ಕಾಗಿ ಮಾತ್ರ ಆಗಿತ್ತು. ಮತ್ತು ಇದು ಸಂಪೂರ್ಣ ಕ್ರೌರ್ಯ ಮತ್ತು

ಅನ್ಯಾಯದೊಂದಿಗೆ, ಹಝ್ರತ್ ಪೈಗಂಬರ್(ಸ)ರ ನೇತೃತ್ವದಲ್ಲಿ ಮುಸ್ಲಿಮರ ಆರಂಭಿಕ ಸೈನ್ಯ ಕಾರ್ಯಾಚರಣೆಗಳನ್ನು ಆಕ್ರಮಣಕಾರಿ ಅಥವಾ ಸ್ವಾರ್ಥಿ ಎಂದು ವಿವರಿಸುವವರಿಗೆ ಪ್ರಾಯೋಗಿಕ ಉತ್ತರವಾಗಿದೆ. ಈ ಯುದ್ಧದ ಒಂದು ಫಲಿತಾಂಶ ಏನಾಯಿತು ಎಂದರೆ ದುಮದ ಜನರು ಗಾಬರಿಗೊಂಡರು ಮತ್ತು ಅವರು ತಮ್ಮ ಭ್ರಷ್ಟ ಕ್ರಿಯೆಗಳಿಂದ ದೂರ ಉಳಿದುಕೊಂಡರು ಮತ್ತು ಹಿಂಸಾಚಾರಕ್ಕೊಳಗಾದ ಪ್ರಯಾಣಿಕರು ಈ ಹಿಂಸಾಚಾರದಿಂದ ರಕ್ಷಿಸಲ್ಪಟ್ಟರು ಮತ್ತು ಇತರ ಸೀರಿಯಾದ ಗಡಿಯಲ್ಲಿ ಮುಸ್ಲಿಮರ ಹೆಸರು ಮಾತ್ರ ತಲುಪಿತು ಮತ್ತು ಜನರು ಇಸ್ಲಾಮಿನ ವಾಸ್ತವತೆಯ ಬಗ್ಗೆ ಸಂಪೂರ್ಣವಾಗಿ ತಿಳಿದಿರಲಿಲ್ಲ ಆ ಪ್ರದೇಶದ ಜನರಿಗೆ ಸ್ವಲ್ಪ ಮಟ್ಟಿಗೆ ಮುಸ್ಲಿಮರ ಮಾರ್ಗ ಮತ್ತು ಸಂಸ್ಕೃತಿಯ ಪರಿಚಯವಾಯಿತು. ಕೆಲವು ಕ್ರಿಶ್ಚಿಯನ್ನರು ದುಮತುಲ್-ಜಂದಲ್‌ನ ಸುತ್ತಮುತ್ತಲೂ ವಾಸಿಸುತ್ತಿದ್ದರು. ಆದರೆ ಈ ಅಭಿಯಾನವನ್ನು ಪ್ರಾರಂಭಿಸಿದ ಈ ದುಷ್ಕರ್ಮಿಗಳು ಕ್ರಿಶ್ಚಿಯನ್ನರೋ ಅಥವಾ ಬಹುದೇವತಾವಾದಿಗಳೋ ಎಂದು ವರದಿಗಳಲ್ಲಿ ಉಲ್ಲೇಖಿಸಲಾಗಿಲ್ಲ. ಆದರೆ ಸನ್ನಿವೇಶಗಳಿಂದ, ಈ ಜನರು ಬಹುಶಃ ಬಹುದೇವತಾವಾದಿಗಳಾಗಿರಬಹುದು ಎಂದು ಭಾವಿಸಲಾಗಿದೆ ಏಕೆಂದರೆ ಈ ಅಭಿಯಾನವು ಕ್ರಿಶ್ಚಿಯನ್ನರ ವಿರುದ್ಧವಾಗಿರುತ್ತಿದ್ದರೆ, ಇತಿಹಾಸಕಾರರು ಅವಶ್ಯಕವಾಗಿ ಇದನ್ನು ಉಲ್ಲೇಖಿಸುತ್ತಿದ್ದರು.
(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ-541)

ಕ್ರಿಶ್ಚಿಯನ್ ಇತಿಹಾಸಕಾರರು ಅವಶ್ಯಕವಾಗಿ ಇದನ್ನು ಉಲ್ಲೇಖಿಸುತ್ತಿದ್ದರು. ಆದಾಗ್ಯೂ, ಅಲ್ಲಾಹನು ಬಲ್ಲವನಾಗಿದ್ದಾನೆ. ಈ ಯುದ್ಧಗಳು ಶತ್ರುಗಳ ದುಷ್ಟತನವನ್ನು ತಡೆಗಟ್ಟಲು ಮತ್ತು ಸಾರ್ವಜನಿಕ ಶಾಂತಿಯ ವಾತಾವರಣವನ್ನು ಸ್ಥಾಪಿಸಲು ಮಾಡಲಾಗಿತ್ತು ಮತ್ತು ಯಾವುದೇ ಕೊಲೆಗಳು ಮತ್ತು ಕಾನೂನುಬಾಹಿರ ಉದ್ಯೋಗಗಳಿಗಾಗಿ ಅಲ್ಲ ಎಂದು ಸಾಬೀತುಪಡಿಸುತ್ತದೆ. ಆದ್ದರಿಂದ, ಇಸ್ಲಾಂ ಧರ್ಮದ ಮೇಲೆ ಹಝ್ರತ್ ಪೈಗಂಬರ್(ಸ)ರ ಮೇಲೆ ಏನು ದೂಷಿಸಲಾಗುತ್ತಿದೆ, ಈ ಘಟನೆಗಳು ಅದನ್ನು ನಿರಾಕರಿಸುತ್ತವೆ, ಏಕೆಂದರೆ ಯಾವುದೇ ಯುದ್ಧ ನಡೆದಿಲ್ಲದಿದ್ದರೆ, ಜನರು ಶಾಂತಿಯುತವಾಗಿ ಹಿಂದಿರುಗುತ್ತಿದ್ದರು ಮತ್ತು ಯಾರಿಗೂ ಹಾನಿ ಮಾಡುತ್ತಿರಲಿಲ್ಲ, ಮತ್ತು ಪ್ರದೇಶದಲ್ಲಿ ಸಾಮಾನ್ಯವಾಗಿ, ಮುಸ್ಲಿಮರ ಈ ಕಾರ್ಯಚರಣೆಯಿಂದ ಶಾಂತಿ ಸ್ಥಾಪಿಸಲಾಯಿತು. ಕೇವಲ ಮುಸ್ಲಿಮರ ತಂಡಗಳಿಗೆ ಹಿಂಸೆಯಿಂದ ಉಳಿಯಲಿಲ್ಲ ಬದಲಿಗೆ ಅವರೊಂದಿಗೆ ಇತರ ಕಾರವಾನ್‌ಗಳು ಸಹ ಪರಿಹಾರವನ್ನು ಪಡೆದರು. ಈ ಎರಡು ಯುದ್ಧಗಳ ಉಲ್ಲೇಖವು ಇಲ್ಲಿ ಕೊನೆಗೊಂಡಿದೆ.

ದುಆದ ಕುರಿತು ಸಹ ಪುನಃ ಗಮನ ಸೆಳೆಯಲು ಬಯಸುತ್ತೇನೆ. ಅಲ್ಲಾಹನು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲಿ ಎಂದು ದುಆ ಮಾಡಿರಿ. ಯಾವ ಶಾಂತಿಗಾಗಿ ಹಝ್ರತ್ ಪೈಗಂಬರ್(ಸ) ತನ್ನ ಕಾಲದಲ್ಲಿ ಪ್ರಯತ್ನಿಸಿದ್ದರೋ ಅದು ಸ್ಥಾಪಿತವಾಗಲಿ. ಹಝ್ರತ್ ಪೈಗಂಬರ್(ಸ)ರ ಆಗಮನದ ಉದ್ದೇಶವೂ ಇದೇ ಆಗಿದೆ. ಇಸ್ಲಾಮಿನ ಬೋಧನೆಯ ಉದ್ದೇಶವೂ ಇದೇ ಆಗಿದೆ. ಇವೆಲ್ಲವೂ ಅಲ್ಲಾಹನ ವಿಶೇಷವಾದ ಕೃಪೆಯಿಂದಲೇ ಆಗುವುದು. ಅದಕ್ಕಾಗಿ ದುಆಗಳ ವಿಶೇಷವಾದ ಅಗತ್ಯವಿದೆ. ಲೋಕ ಜನರು ಈಗ ತಮ್ಮ ಸ್ವಂತ ಕಾಲಿಗೆ ಕೊಡಲಿ ಹೊಡೆಯಲು ತಯಾರಾಗಿ ನಿಂತಿದ್ದಾರೆ ಎಂದು ತೋರುತ್ತಿದೆ. ಬಾಹ್ಯವಾಗಿ ನೋಡುವಾಗ ಶಾಂತಿ ಸ್ಥಾಪನೆಯ ಸ್ಥಿತಿ ಕಂಡುಬರುತ್ತಿಲ್ಲ. ಮತ್ತೊಂದೆಡೆ ಈ ಪಾಶ್ಚಿಮಾತ್ಯ ದೇಶಗಳಲ್ಲಿ ಈಗ ಮುಸ್ಲಿಮರ ವಿರುದ್ಧವೂ ಕಾರ್ಯಾಚರಣೆಗಳು ಬಹಳ ತ್ವರಿತಗೊಂಡಿವೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಾಗುವುವು ಎಂದೇ ತೋರುತ್ತಿದೆ. ಅದಕ್ಕಾಗಿಯೂ ಮುಸ್ಲಿಮರಿಗೆ ತಮ್ಮ ರಕ್ಷಣೆಯ ಏರ್ಪಾಡು ಮಾಡಬೇಕಾಗುವುದು. ಒಂದು ಒಗ್ಗಟ್ಟು ಉಂಟುಮಾಡಬೇಕಾಗುವುದು. ತಮ್ಮ ಸ್ಥಿತಿಗಳನ್ನು ಉತ್ತಮ ಗೊಳಿಸಬೇಕಾಗುವುದು. ಮುಸ್ಲಿಮರು ಇದನ್ನು ಅರಿಯುವಂತೆ ಅಲ್ಲಾಹನು ಮಾಡಲಿ. ಸೂಡಾನ್ ಮುಂತಾದ ಮುಸ್ಲಿಂ ದೇಶಗಳಲ್ಲಿ ಮುಸ್ಲಿಮರು ಮುಸ್ಲಿಮರನ್ನು ಪೀಡಿಸುತ್ತಿದ್ದಾರೆ. ಅವರಿಗಾಗಿಯೂ ದುಆ ಮಾಡಿರಿ. ಇವರು ಧರ್ಮದ ಮೂಲೋದ್ದೇಶವನ್ನು ಮರೆತು ತಮ್ಮ ಸಹೋದರರನ್ನೇ ಕೊಲ್ಲುತ್ತಿದ್ದಾರೆ. ಇದೇ ಕಾರಣದಿಂದ ಅನ್ಯರು ಕೂಡ ಮುಸ್ಲಿಮರ ಮೇಲೆ ದೌರ್ಜನ್ಯ ಮಾಡುತ್ತಿದ್ದಾರೆ.

ಅಲ್ಲಾಹನು ಇವರನ್ನು ದೇಶದ ಮತ್ತು ಸಮುದಾಯದ ಸೇವೆ ಮಾಡುವವರನ್ನಾಗಿ ಮತ್ತು ಶಾಂತಿ ಸ್ಥಾಪಿಸುವವರನ್ನಾಗಿ ಮಾಡಲಿ - ಆಮೀನ್.

**(ಅಲ್-ಫಝ್ಲ್ ಇಂಟರ್‌ನ್ಯಾಶನಲ್ 22-27 ಜುಲೈ 2024, ಪುಟ 5-9)**

-------------*****-------------

## ತಫ್ಸೀರೆ ಕಬೀರ್

ಕ್ರಿಶ್ಚಿಯನ್ ರಾಷ್ಟ್ರದ ಆರಂಭವು ಹೀಗಿತ್ತು: ಅವರು ವಿಗ್ರಹಾರಾಧನೆಯ ವಿರುದ್ಧ ಜಿಹಾದ್ ನಡೆಸುತ್ತಿದ್ದರು ಮತ್ತು ಬಹುದೇವತಾವಾದವನ್ನು ತಪ್ಪಿಸಲು ಶತಮಾನಗಳವರೆಗೆ ದೊಡ್ಡ ತ್ಯಾಗಗಳನ್ನು ಮಾಡಿದರು. ಆದರೆ ಅದರ ಅಂತ್ಯವು ಹೇಗಾಯಿತು ಎಂದರೆ ಈಗ ಕ್ರಿಶ್ಚಿಯನ್ನರಲ್ಲಿ ನಿಜವಾದ ಧರ್ಮದ ಯಾವುದೇ ಕುರುಹು ಕಂಡುಬರುವುದಿಲ್ಲ.

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಕಹಫ್ ಮತ್ತು ಅಸ್‌ಹಾಬೆ ಕಹಫ್‌ನ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ಕಹಫ್ (ಗುಹೆಯ) ಬಗ್ಗೆ ಕೆಲವು ಸಂಗತಿಗಳನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ, ನಾನು ವಿವರಿಸಿದಂತೆ ಕಹಫ್ ಎಂದರೆ ಭೂಗತ ಕೋಣೆಗಳ ಹೆಸರಾಗಿರುವ **ಕ್ಯಾಟಕಾಂಬ್**ಗಳನ್ನು ಉಲ್ಲೇಖಿಸುತ್ತದೆ. ರೋಮನ್ನರು ಮತ್ತು ಯಹೂದಿಗಳಲ್ಲಿ ಸತ್ತವರನ್ನು ಕೋಣೆಗಳಲ್ಲಿ ಇಡುವುದು ವಾಡಿಕೆಯಾಗಿತ್ತು. ರೋಮನ್ ಸಾಮ್ರಾಜ್ಯದ ದೊಡ್ಡ ನಗರಗಳಲ್ಲಿ, ಅಂತಹ ಸ್ಥಳಗಳನ್ನು ನಗರಗಳ ಹೊರಗೆ ನಿರ್ಮಿಸಲಾಗುತ್ತಿತ್ತು ಮತ್ತು ಅವುಗಳನ್ನು **ಕ್ಯಾಟಕಾಂಬ್ಸ್** ಎಂದು ಕರೆಯಲಾಗುತ್ತಿತ್ತು. ಕ್ರಿಶ್ಚಿಯನ್ನರು ಕಿರುಕುಳಕ್ಕೊಳಗಾದಾಗ, ಅವರು ತಮ್ಮ ಜೀವಗಳನ್ನು ಉಳಿಸಲು ಈ ಸ್ಮಶಾನಗಳಲ್ಲಿ ಆಶ್ರಯವನ್ನು ಪಡೆಯಲು ಪ್ರಾರಂಭಿಸಿದರು, ಇದು ಎರಡು ರೀತಿಯಲ್ಲಿ ತಿಳಿದಿದುಬರುತ್ತದೆ. ಮೊದಲನೆಯದಾಗಿ, ಅವರು ನೆಲದ ಕೋಣೆಗಳಲ್ಲಿ ಸುಲಭವಾಗಿ ಮರೆಮಾಡಬಹುದಾಗಿತ್ತು ಮತ್ತು ಕುಳಿತುಕೊಳ್ಳಲು, ಮಲಗಲು ಮತ್ತು ಹವಾಮಾನದಿಂದ ರಕ್ಷಣೆಪಡೆಯಲು ಉಪಕರಣಗಳು ಇದ್ದವು. ಎರಡನೇಯದಾಗಿ, ಸಾಮಾನ್ಯವಾಗಿ ಜನರು ಸ್ಮಶಾನವೆಂದರೆ ಹೆದರುತ್ತಾರೆ ಮತ್ತು ಹೀಗೆ ಸಾರ್ವಜನಿಕರ ಕಣ್ಣಿನಿಂದ ತಪ್ಪಿಸಿಕೊಳ್ಳುವ ಸಾಧ್ಯತೆ ಹೆಚ್ಚಾಗಿತ್ತು. ಇದು ಅಲೆಕ್ಸಾಂಡ್ರಿಯಾ, ರೋಮ್ ಬಳಿಯ ಈಜಿಪ್ಟ್‌ನ ನಗರ, ಸಿಸಿಲಿ, ಮಾಲ್ಟಾ, ನೇಪಲ್ಸ್‌ನಲ್ಲಿದೆ ಎಂದು ಇದುವರೆಗೆ ಕಂಡುಹಿಡಿಯಲಾಗಿದೆ. ಶ್ರೀ. ಬೆಂಜಮಿನ್ ಸ್ಕಾಟ್ ಅವರು ತಮ್ಮ ಪುಸ್ತಕ "ದಿ ಕ್ಯಾಟಕಾಂಬ್ಸ್ ಆಫ್ ರೋಮ್" ನಲ್ಲಿ ಬರೆಯುತ್ತಾರೆ, "ಈ ಆರಂಭಿಕ ಕಾಲದಲ್ಲಿಯೂ (ಪೋಲೂಸ್ ರೋಮ್‌ಗೆ ಹೋದಾಗ) ಕ್ರಿಶ್ಚಿಯನ್ನರು ತಮ್ಮ ಸುರಕ್ಷತೆಯ ಆಲೋಚನೆಯಿಂದ ಜನರ ಕೋಪದಿಂದ ತಪ್ಪಿಸಿಕೊಳ್ಳಲು ಮತ್ತು ಯಹೂದಿಯರ ಹಿಂಸಾಚಾರ ಮತ್ತು ರೋಮ್ ಆಡಳಿತದ ಹಿಂಸಾಚಾರದಿಂದ ತಪ್ಪಿಸಿಕೊಳ್ಳಲು ಈ ನೆಲಮಾಳಿಗೆಗಳಲ್ಲಿ ಆಶ್ರಯ ಪಡೆಯುತ್ತಿದ್ದರು. (ಪುಟ-63) ಮತ್ತೆ ಮುಂದುವರಿಸುತ್ತ ಬರೆಯುತ್ತಾರೆ: "ನಿಸ್ಸಂದೇಹವಾಗಿಯೂ ಅವರು ಈ ಹೊಂಡಗಳಲ್ಲಿ ಮತ್ತು ನೆಲಮಾಳಿಗೆಗಳಲ್ಲಿ ಆಶ್ರಯಪಡೆಯಲು ನಿಸ್ಸಹಾಯಕರಾಗಿದ್ದರು." ಈ ಜಾಗದಲ್ಲಿ ಲೇಖಕರು ಈ ನೆಲಮಾಳಿಗೆಗಳಿಗೆ Cave "ಗುಹೆ" ಎಂಬ ಪದವನ್ನು ಬಳಸಿದ್ದಾರೆ, ಇದು ಅರೇಬಿಕ್ ಪದ ಕಹಫ್‌ನ ಅರ್ಥವಾಗಿದೆ. ಈ ರೀತಿಯಾಗಿ ಈ ಇಂಗ್ಲಿಷ್ ಲೇಖಕರು ಪವಿತ್ರ ಖುರ್‌ಆನ್ ಬಳಸಿದ ಪದವನ್ನೆ ನಿಖರವಾಗಿ ಬಳಸಿದ್ದಾರೆ, ಅವರು ಹಾಗೆ ಮಾಡಬೇಕಾಗಿದೆ ಎಂದು ರೋಮನ್ ಇತಿಹಾಸಕಾರ ಟ್ಯಾಸಿಟಸ್ನ ಸಾಕ್ಷ್ಯದಿಂದ ಸಾಬೀತಾಗಿದೆ. ಕ್ರಿಶ್ಚಿಯನ್ನರನ್ನು ಜೀವಂತವಾಗಿ ಸುಡುವ, ನಾಯಿಗಳಿಗೆ ಹರಿದು ಹಾಕುವ ಮತ್ತು ಜನರನ್ನು ಮೆಚ್ಚಿಸಲು ಶಿಲುಬೆಗಳನ್ನು ನೀಡುವ ವಿವಿಧ ವಿಧಾನಗಳನ್ನು ನೇರೋ ಅಳವಡಿಸಿಕೊಂಡಿದ್ದಾನೆ ಮತ್ತು ಈ ಉದ್ದೇಶಕ್ಕಾಗಿ ಅವನು ತನ್ನ ರಾಜ ಉದ್ಯಾನವನವನ್ನು ನೀಡಿದ್ದಾನೆ ಎಂದು ಅವರು ಹೇಳುತ್ತಾರೆ. ಹೀಗೆ ಸಾಮಾನ್ಯ ರೀತಿಯಲ್ಲಿ ತುಳಿತಕ್ಕೊಳಗಾಗುವ ಜನರು ಅಲ್ಲಿ ಇಲ್ಲಿ ತಪ್ಪಿಸಿಕೊಂಡು ಆಶ್ರಯ ಪಡೆಯುತ್ತಿದ್ದರು ಎಂಬುದು ಸ್ಪಷ್ಟವಾಗಿದೆ.

ಕ್ರಿಶ್ಚಿಯನ್ನರು ಈ ಸ್ಥಳಗಳಲ್ಲಿ ಆಶ್ರಯ ಪಡೆಯಲು ಪ್ರಾರಂಭಿಸಿದಾಗ, ಅವರು ಆಶ್ರಯದ ದಿನಗಳಲ್ಲಿ ಹೆಚ್ಚಿನ ಭದ್ರತೆಗಾಗಿ ಕೊಠಡಿಗಳನ್ನು ನಿರ್ಮಿಸಲು ಪ್ರಾರಂಭಿಸಿದರು. ಅದೇ ರೀತಿ ಹುತಾತ್ಮರಾದವರ ದೇಹಗಳನ್ನು ಸಂರಕ್ಷಿಸಲು ಈ ನೆಲಮಾಳಿಗೆಗಳಲ್ಲಿ ಹೂಳುತ್ತಿದ್ದರು ಮತ್ತು ಈ ಪ್ರಕ್ರಿಯೆಯು ಮುನ್ನೂರು ವರ್ಷಗಳ ಕಾಲ ನಡೆದಿದ್ದರಿಂದ ಈ ನೆಲಮಾಳಿಗೆಗಳು ಎಷ್ಟೊಂದು ಸಂಖ್ಯೆಯಲ್ಲಿವೆಯೆಂದರೆ ಕೆಲವರ ಅಂದಾಜಿನ ಪ್ರಕಾರ. ಹದಿನೈದು ಮೈಲಿ ಉದ್ದದವರೆಗೆ ಹೋಯಿತು.

ಕ್ರೌರ್ಯವು ಏಕರೂಪವಾಗಿ ಕೆಲಸ ಮಾಡುವುದಿಲ್ಲದ್ದರಿಂದ. ನಡುನಡುವೆ ಕೆಲವು ರಾಜರು ಮೃಧುವಾಗಿ ವರ್ತಿಸುತ್ತಿದ್ದರಿಂದ ಕ್ರೈಸ್ತರು ಮತ್ತೆ ನಗರಕ್ಕೆ ಹಿಂದಿರುಗುತ್ತಿದ್ದರು. ತದನಂತರ ಮತ್ತೆ ಸಂಕಷ್ಟದ ಕಾಲ ಬಂದಾಗ ಓಡಿಹೋಗಿ ಈ ಸ್ಥಳಗಳಲ್ಲಿ ಅಡಗಿಕೊಳ್ಳುತ್ತಿದ್ದರು ಮತ್ತು ಕೆಲವೊಮ್ಮೆ ಅದರೊಳಗೆ ಶಾಲೆಗಳು ಮತ್ತು ಚರ್ಚ್‌ಗಳ ಕೊಠಡಿಗಳು ಕಂಡುಬಂದಿದ್ದರಿಂದ

ಅವರು ತಿಂಗಳು ಅಥವಾ ವರ್ಷಗಳ ಕಾಲ ಅಲ್ಲಿಯೇ ಇರಬೇಕಾಗಿತ್ತು ಎಂದು ತಿಳಿದುಬರುತ್ತದೆ.

ಈ ನೆಲಮಾಳಿಗೆಗಳನ್ನು ಮೂರು ಮಹಡಿಗಳಲ್ಲಿ ನಿರ್ಮಿಸಲಾಗಿದೆ ಮತ್ತು ನಾನು 1924 ರಲ್ಲಿ ಇಂಗ್ಲೆಂಡ್‌ಗೆ ಹೋಗುವಾಗ ರೋಮ್‌ನಲ್ಲಿ ನನ್ನ ಸ್ವಂತ ಕಣ್ಣುಗಳಿಂದ ನೋಡಿದ್ದೇನೆ. ಮೊದಲ ಮಹಡಿಯಲ್ಲಿರುವ ಕೊಠಡಿಗಳನ್ನು ಹೆಚ್ಚು ತೊಂದರೆಯಿಲ್ಲದೆ ನೋಡಬಹುದು. ಎರಡನೇ ಮಹಡಿಯು ತುಂಬಾ ಉಸಿರುಗಟ್ಟುತ್ತದೆ ಮತ್ತು ಮೂರನೇ ಮಹಡಿಗೆ ಹೋಗಬೇಕಾದರೆ, ಅಂದರೆ ತೇವಾಂಶ ಮತ್ತು ಕತ್ತಲೆಯಿಂದಾಗಿ ಕಡಿಮೆ ನೆಲಮಾಳಿಗೆಯು ಬಹುತೇಕ ಅಸಾಧ್ಯವಾಗಿದೆ. ಈ ನೆಲಮಾಳಿಗೆಗಳನ್ನು ಕ್ರಿಶ್ಚಿಯನ್ನರು ತಮ್ಮ ಅಗತ್ಯಗಳಿಗೆ ಅನುಗುಣವಾಗಿ ಮರೆತುಹೋದಂತೆ ಮಾಡಿರುವುದನ್ನು ನಾನು ನೋಡಿದ್ದೇನೆ ಮತ್ತು ಅವುಗಳಲ್ಲಿ ಈ ಕೆಳಗಿನ ರಕ್ಷಣಾ ವಿಧಾನಗಳನ್ನು ಬಳಸಲಾಗಿದೆ:

(1) ಅಪರಿಚಿತರು ಬಂದಾಗ ಅವರ ಬೊಗಳುವಿಕೆಯಿಂದ ತಿಳಿಯುವಂತೆ ಆ ಜನರು ಬಾಗಿಲುಗಳಲ್ಲಿ ನಾಯಿಗಳನ್ನು ಸಾಕುತ್ತಿದ್ದರು. (2) ಅವರು ಆಶ್ರಯಪಡೆದ ನೆಲಮಾಳಿಗೆಯಾಗಿದ್ದರಿಂದ. ಅವರು ಭೂಮಿಯಿಂದ ಅದರಲ್ಲಿ ಪ್ರವೇಶಿಸಲು ಮಾರ್ಗವಿದ್ದರಿಂದ ಅಲ್ಲಿ ಮಣ್ಣಿನ ಏಣಿ ಇರುತ್ತಿರಲಿಲ್ಲ ಬದಲಿಗೆ ಅವರು ಮರದ ಏಣಿಯುನ್ನು ಇಟ್ಟುಕೊಂಡಿದ್ದರು, ಇದರಿಂದಾಗಿ ಅವರು ತಮ್ಮ ವ್ಯಕ್ತಿಗೆ ಬಂದ ನಂತರ ಏಣಿಯನ್ನು ಅಲ್ಲಿಂದ ತೆಗೆದುಹಾಕಬಹುದು. ಆದ್ದರಿಂದ ಶತ್ರುಗಳು ತಕ್ಷಣವೇ ಕೊಠಡಿಗಳನ್ನು ತಲುಪಲು ಸಾಧ್ಯವಾಗುವುದಿಲ್ಲ. (3) ಆದರೆ ಅವರು ಜಿಗಿದು ಅಥವಾ ಏಣಿಯನ್ನು ತಮ್ಮೊಂದಿಗೆ ತಂದರೆ, ಭದ್ರತೆಗಾಗಿ, ಪ್ರತಿ ಕೋಣೆಯಿಂದ ನಾಲ್ಕು ಮಾರ್ಗಗಳನ್ನು ಮಾಡಲಾಗಿತ್ತು, ಅವುಗಳಲ್ಲಿ ಒಂದು ದಾರಿ ಮುಂದಿನ ಕೋಣೆಗೆ ಹೋಗುತ್ತಿತ್ತು ಆದರೆ ಇನ್ನುಳಿದ ಮಾರ್ಗಗಳು ಸ್ವಲ್ಪ ದೂರದ ನಂತರ ಮುಚ್ಚಲಾಗಿತ್ತು. ಕ್ರಿಶ್ಚಿಯನ್ನರು ಪರಿಚಿತರಾಗಿದ್ದರಿಂದ ತಕ್ಷಣವೇ ಮುಂದಿನ ಕೋಣೆಯ ಕಡೆಗೆ ಓಡಿಹೋಗುತ್ತಿದ್ದರು ಮತ್ತು ಹಿಂಬಾಲಿಸುವವರು ತಪ್ಪು ದಾರಿಗೆ ಹೋಗುತ್ತಿದ್ದರು ಮತ್ತು ಮುಂದಿನ ದಾರಿಯನ್ನು ನೋಡಿ ಬೇರೆ ದಾರಿಗೆ ಮರಳುತ್ತಾರೆ ಎಂಬ ಪ್ರಯೋಜನವನ್ನು ಇದು ಹೊಂದಿತ್ತು. ಈ ರೀತಿಯಾಗಿ, ಪಲಾಯನಗೈದವರು ಪದೇ ಪದೇ ತಪ್ಪು ನಿರ್ದೇಶನದಿಂದಾಗಿ ಕ್ರಿಶ್ಚಿಯನ್ನರಿಗಿಂತ ಬಹಳ ಹಿಂದೆ ಇರುತ್ತಾರೆ. ಮೊದಲಿಗೆ, ಈ ಅನ್ವೇಷಣೆಯು ಪೊಲೀಸರನ್ನು ತೊಂದರೆಗೊಳಗಾಗುತ್ತದೆ, ಆದರೆ ಅವರು ಕೊನೆಯವರೆಗೂ ಹಿಂಬಾಲಿಸಿದರೂ, (4) ಕ್ರಿಶ್ಚಿಯನ್ನರು ಎರಡನೇ ಮಹಡಿಗೆ ಹೋಗುತ್ತಿದ್ದರು, ಕೆಳ ನೆಲಮಾಳಿಗೆಗಳು, ಇದು ಕಿರಿದಾದ, ಗಾಢವಾದ ಮತ್ತು ಬದಿಗಳಿಗಿಂತ ಹೆಚ್ಚು ಸಂಕೀರ್ಣವಾಗಿದೆ. ಇಲ್ಲಿಯೂ ಸಹ ಅನ್ವೇಷಣೆ ಯಶಸ್ವಿಯಾಗಿದ್ದರೂ, (5) ಅವುಗಳ ಕೆಳಗೆ ಮೂರನೇ ನೆಲಮಾಳಿಗೆಗಳಿದ್ದವು, ಅದರಲ್ಲಿ ನಾವು ಎರಡು ಅಥವಾ ನಾಲ್ಕು ನಿಮಿಷಗಳ ಕಾಲ ಇರಲು ಸಾಧ್ಯವಾಗಲಿಲ್ಲ, ಏಕೆಂದರೆ ಅವುಗಳು ಈಗ ಬಿದ್ದು ತುಂಬಾ ಆರ್ದ್ರವಾಗಿವೆ, ಆದರೆ ಒಂದು ಕಾರಣವೆಂದರೆ , ಕ್ರೈಸ್ತರು ಅನ್ವೇಷಣೆಯ ಸಮಯದಲ್ಲಿ ಸ್ವಲ್ಪ ಸಮಯದವರೆಗೆ ಆಶ್ರಯ ಪಡೆದ ಭಯಾನಕ ಸ್ಥಳಗಳಿವೆ, ಏಕೆಂದರೆ ಎಲ್ಲಾ ಮಾರ್ಗಗಳ ಉದ್ದವು ನೂರಾರು ಮೈಲುಗಳವರೆಗೆ ಹೋಗುತ್ತದೆ, ಕ್ರಿಶ್ಚಿಯನ್ನರು ಈ ಸ್ಥಳಗಳಲ್ಲಿ ಹಿಡಿಯುವುದು ಸುಲಭವಲ್ಲ ಎಂಬುದು ಸ್ಪಷ್ಟವಾಗಿದೆ. ಆದರೆ ಸರ್ಕಾರವು ಅನೇಕ ಬಾರಿ ಈ ಜನರನ್ನು ಅಲ್ಲಿ ಹಿಡಿಯುತ್ತಿದ್ದರು ಅವರನ್ನು ಅಲ್ಲಿಯೇ ಕೊಲ್ಲುತ್ತಿದ್ದರು. ನಾನು ಅಂತಹ ಹುತಾತ್ಮರ ಅನೇಕ ಸಮಾಧಿಗಳನ್ನು ನಾನು ಅಲ್ಲಿ ನೋಡಿದ್ದೇನೆ. ನಾವು ಪಾದ್ರಿಯಿಂದ ಕೆಲವು ಕತ್ಬಗಳನ್ನು ಓದಿಸಿದ್ದೇವೆ ಮತ್ತು ಅವುಗಳಲ್ಲಿ ಹುತಾತ್ಮರಾದ ಸಮಯದಲ್ಲಿ ಅವರಿಗೆ ಸಂಭವಿಸಿದ ನೋವಿನ ಘಟನೆಗಳನ್ನು ವಿವರಿಸಲಾಗಿದೆ ಎಂದು ಕಂಡುಕೊಂಡೆವು.

ಇತ್ತೀಚೆಗೆ ಪತ್ತೆಯಾದ ಹೊಸ ಸಮಾಧಿಗಳು ಮತ್ತು ಶಾಸನಗಳಲ್ಲಿ ಪೀಟರ್ ಅವರೊಂದಿಗೆ ಉಳಿದುಕೊಂಡ ಅಥವಾ ಬೈಬಲ್ನಲ್ಲಿ ಉಲ್ಲೇಖಿಸಲಾದ ಜನರ ಸಮಾಧಿಗಳು ಸಹ ಕಂಡುಬಂದಿವೆ. (ಕ್ಯಾಟಕಾಂಬ್ಸ್ ಪದದೊಂದಿಗೆ ಎನ್ಸೈಕ್ಲೋಪೀಡಿಯಾ ಬ್ರಿಟಾನಿಕಾ)

ಸಂಕ್ಷಿಪ್ತವಾಗಿ ಹೇಳುವುದಾದರೆ, ಅಸ್‌ಹಾಬೆ ಕಹಫ್‌ಗಳ ಕಥೆಯಲ್ಲಿ, ಕ್ರಿಶ್ಚಿಯನ್ನರ ಆರಂಭಿಕ ದಿನಗಳ ಪರಿಸ್ಥಿತಿಗಳನ್ನು ಪ್ರಸ್ತುತಪಡಿಸಲಾಗಿದೆ ಮತ್ತು ಕ್ರಿಶ್ಚಿಯನ್ ರಾಷ್ಟ್ರದ ಪ್ರಾರಂಭವು ಅವರು ವಿಗ್ರಹಾರಾಧನೆಯ ವಿರುದ್ಧ ಜಿಹಾದ್ ಮಾಡುವ ರೀತಿಯಲ್ಲಿತ್ತು ಎಂದು ಹೇಳಲಾಗಿದೆ. ಮತ್ತು ಬಹುದೇವತಾರಾಧನೆಯನ್ನು ತಪ್ಪಿಸಲು, ಅವರು ಶತಮಾನಗಳವರೆಗೆ ಮಹತ್ತರವಾದ ಕೆಲಸಗಳನ್ನು, ತ್ಯಾಗಗಳನ್ನು ಮಾಡಿದರು. ಆದರೆ ಅಂತ್ಯದಲ್ಲಿ ಅವರಲ್ಲಿ ನಿಜವಾದ ಧರ್ಮದ ಯಾವುದೇ ಕುರುಹುಗಳನ್ನು ಇನ್ನು ಕಂಡುಬರುತ್ತಿಲ್ಲ.

**(ತಫ್ಸೀರ್ ಕಬೀರ್, ಸಂಪುಟ–4, ಪುಟ–424, 2010 ಖಾದಿಯಾನ್)**

## ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ. **(ಮಲ್‌ಫೂಝಾತ್, ಸಂಪುಟ–5, ಪುಟ–354, ಮುದ್ರಣ ಖಾದಿಯಾನ್ 2003)**

## ವಿವಾಹ ಸಂದರ್ಭದಲ್ಲಿ ನಿಷ್ಪ್ರಯೋಜಕ ಸಂಗೀತ, ಕುಣಿತ ಹಾಗೂ ಹಾಡುಗಳನ್ನು ಹಾಡಲು ಅನುಮತಿ ಇಲ್ಲ.

ಹಝ್ರತ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್ (ಅತಬಿಅ) ಹೇಳುತ್ತಾರೆ: "ಸಂತೋಷದ ಸಂದರ್ಭಗಳಲ್ಲಿ ಅಲ್ಲಾಹನ ಅನುಗ್ರಹಗಳನ್ನು ಬೇಡುವ ವಿವಾಹವನ್ನು ಅಲ್ಲಾಹನು ಎಲ್ಲಾ ರೀತಿಯಿಂದ ಯಶಸ್ಸಿಗೊಳಿಸಲಿ. ಬರುವ ಪೀಳಿಗೆ ಇಸ್ಲಾಮ್ ಧರ್ಮದ ಸೇವಕರಾಗಿರಲಿ, ಅಲ್ಲಾಹನ ವಿಧೇಯ ದಾಸರಾಗಿರಲಿ ಎನ್ನುವ ಬದಲು ಅಜಾಗೃತಗೊಂಡು ಹಾಡುಗಳನ್ನು ಹಾಡುತ್ತ ಶಿರ್ಕ್ (ಬಹು ದೇವಾರಾಧನೆ) ಮಾಡುವವರಾಗಿರುತ್ತಾರೆ. ದೂರುಗಳು ಬರುತ್ತಿರುತ್ತವೆ ಆದುದರಿಂದ ಇಂತಹ ಮನೆಯವರಿಗೆ ನಾನು ಎಚ್ಚರಿಕೆ ನೀಡುತ್ತೇನೆ, ಈ ರೀತಿಯ ನಿಷ್ಪ್ರಯೋಜಕ ಹಾಗೂ ನಿರರ್ಥಕತೆಯಿಂದ ದೂರವಿರಬೇಕು, ಹೀಗೆಯೇ ಡ್ಯಾನ್ಸ್ ಕುಣಿತಗಳಿಂದ, ವಧುವಿನ ಮನೆಯಲ್ಲಿ ನಾನಾ ರೀತಿಯ ಶೃಂಗಾರಗಳು ಅಥವಾ ವಿವಾಹ ನಂತರ ವಧು ವಿವಾಹವಾಗಿ ವರನ ಮನೆಗೆ ಹೋದಾಗ ಅಲ್ಲಿ ಕೆಲವು ಸಂದರ್ಭಗಳಲ್ಲಿ ನಿಷ್ಪ್ರಯೋಜಕ ರೀತಿಯ ಸಂಗೀತ ಅಥವಾ ಹಾಡುಗಳಿಗೆ ಕುಣಿಯುತ್ತಾರೆ, ಇದಕ್ಕೆ ಯಾವ ಕಾರಣಕ್ಕೂ ಅನುಮತಿ ನೀಡಲಾಗುವುದಿಲ್ಲ." **(ಖುತ್‌ಬಾತೆ ಮಸ್‌ರೂರ್, ಸಂಪುಟ–3, ಪುಟ–687)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

ಪುರುಷನು ಮೈತುಂಬ ಬಟ್ಟೆ ಧರಿಸುವವನಾದರೆ well dressed ಅಂದುಕೊಳ್ಳುತ್ತಾನೆ. ಅಂದರೆ ಕೋಟ್ ಧರಿಸಿರಬೇಕು. ಟೈ ಹಾಕಿರಬೇಕು. ಆದರೆ ಹೆಣ್ಣು well dressed ಅಂದುಕೊಳ್ಳಬೇಕಾದರೆ ಅವಳು ಮಿನಿಸ್ಕರ್ಟ್ ಹಾಕಿರಬೇಕು. ಈ ತತ್ವ ನನಗೆ ಅರ್ಥವಾಗಲಿಲ್ಲ.

ಸ್ತ್ರೀಯರು ತನ್ನನ್ನು ಬೆತ್ತಲೆ ಮಾಡಿಕೊಳ್ಳುತ್ತಿದ್ದಾರೆ. ತನ್ನನ್ನು ಅಪಮಾನಿಸಿಕೊಳ್ಳುತ್ತಿದ್ದಾರೆ. ಅಹ್ಮದಿ ಹುಡುಗಿಯರು, ಸ್ತ್ರೀಯರು ತಮ್ಮ ಗೌರವ ಘನತೆ ತನ್ನ ಲಜ್ಜೆಯನ್ನು ಕಾಪಾಡಿಕೊಳ್ಳುವುದಲ್ಲಿಯೇ ಇದೆ ಎಂದು ಭಾವಿಸಬೇಕು. ಏಕೆಂದರೆ ಲಜ್ಜೆಯೇ ಕವಚರಕ್ಷೆಯಾಗಿದೆ. ಅದುವೇ ನಮ್ಮನ್ನು ಇತರರ ದೃಷ್ಟಿಯಿಂದ ರಕ್ಷಿಸುತ್ತದೆ.

**ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ಅವರೊಡನೆ ಕೇಳಲಾದ ಪ್ರಶ್ನೆಗಳಿಗೆ ವಿವೇಕಯುತ ಉತ್ತರಗಳು.**

**ಸೂಚನೆ:** ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ವಿಭಿನ್ನ ಸದರ್ಭಗಳಲ್ಲಿ ತನ್ನ ಪತ್ರಗಳಲ್ಲಿ ಮತ್ತು MTA ಯ ಕಾರ್ಯಕ್ರಮಗಳಲ್ಲಿ ಮುಖ್ಯ ಸಮಸ್ಯೆಗಳ ಕುರಿತು ನೀಡಿದ ಅಧ್ಯಾಪನೆಗಳಲ್ಲಿ ಕೆಲವು ಓದುಗರ ಹಿತದೃಷ್ಟಿಯಿಂದ ಅಲ್-ಫಝ್ಲ್ International ನ ಕೃಪೆಯಿಂದ ಮುದ್ರಿಸಲಾಗುತ್ತದೆ. (ಸಂಪಾದಕರು)

**ಭಾಗ-1**

**ಪ್ರಶ್ನೆ:** ಮಿತ್ರರೊಬ್ಬರು ಕೇಳಿದರು. ದಾರುಖುತನಿಯಲ್ಲಿ ಒಂದು ಹದೀಸಿದೆ. ಹುಝೂರ್(ಸ) ಈದ್ ನಮಾಝ್ ನಂತರ ಹೇಳಿದರು. ನಾವು ಖುತುಬ ನೀಡುವೆವು. ಆಲಿಸಬಯಸುವವರು ಕುಳಿತುಕೊಳ್ಳಬಹುದು, ಹೋಗಬಯಸುವವರು ಹೋಗಬಹುದು, ಈ ಹದೀಸು ಸರಿಯೇ? ಆಗ ಹುಝೂರ್ ಅನ್ವರ್ ತನ್ನ ಪತ್ರ ದಿನಾಂಕ 20 ಅಕ್ಟೋಬರ್ 2020 ರಲ್ಲಿ ಈ ಕೆಳಗಿನಂತೆ ಉತ್ತರ ನೀಡಿದರು.

**ಉತ್ತರ:** ಖುತುಬ ಈದ್ ಆಲಿಸುವ ರಿಯಾಯಿತಿಯ ಕುರಿತು ನೀವು ದಾರ್‌ಖುತುನಿಯ ಆಧಾರ ತಮ್ಮ ಪತ್ರದಲ್ಲಿ ನೀಡಿದ್ದೀರಿ. ಸುನನ್ ಅಬಿ ದಾವೂದ್‌ನಲ್ಲೂ ಆ ವರದಿ ಇದೆ.

ಈ ಮಾತು ಸರಿಯಾಗಿದೆ. ಹುಝೂರ್(ಸ) ಈದ್ ಖುತುಬ ಆಲಿಸಲು, ಜುಮುಅ ಖುತುಬ ಆಲಿಸುವಷ್ಟು ತಾಕೀತು, ಮೌನವಹಿಸಿ ಆಲಿಸಲು ಮಾಡಿರುವ ತಾಕೀತಿನಂತೆ ಆಗ್ರಹಪಡಿಸಲಿಲ್ಲ. ಅದನ್ನೇ ಆಧಾರವಾಗಿಟ್ಟುಕೊಂಡು ಉಲಮಾಅ, ತತ್ವವಾದಿಗಳು ಈದ್ ಖುತುಬ ಆಲಿಸುವುದು ಸುನ್ನತ್ ಮತ್ತು ಮುಸ್ತಹಬ್ ಎಂದಿದ್ದಾರೆ. ಆದರೆ ಅದರ ಜೊತೆಯಲ್ಲಿ ಈ ಮಾತು ನೆನಪಿಡಬೇಕು. ಹುಝೂರ್(ಸ) ಈದ್‌ಗೋಸ್ಕರ ಹೋಗಲು ಮತ್ತು ಮುಸ್ಲಿಮರ ದುಆಗಳಲ್ಲಿ ಪಾಲ್ಗೊಳ್ಳುವುದು ಪುಣ್ಯ ಮತ್ತು ಅನುಗ್ರಹದಾಯಕವಾಗಿದೆ ಎಂದರು. ಮತ್ತು ಅದನ್ನು ಎಷ್ಟರಮಟ್ಟಿಗೆ ತಾಕೀತುಪಡಿಸಿದರೆಂದರೆ, ಶಿರವಸ್ತ್ರ ಇಲ್ಲದ ಸ್ತ್ರೀಯೊಬ್ಬಳನ್ನು ಅನ್ಯ ಸಹೋದರಿಯೊಬ್ಬರಿಂದ ಬೇಡಿಕೊಂಡಾದರೂ ಪಡೆದು ಈದ್‌ಗೋಸ್ಕರ ಹೋಗಲು ಪ್ರೇರೇಪಿಸಿದ್ದಾರೆ. ಮುಟ್ಟಿನ ಅವಸ್ಥೆಯ ಸ್ತ್ರೀಯರನ್ನು ಸಹ ಈದ್‌ಗೋಸ್ಕರ ಹೋಗಲು ನಿರ್ದೇಶನ ನೀಡಿದ್ದಾರೆ. ಅವರು ನಮಾಝ್ ಸ್ಥಳದಿಂದ ಪ್ರತ್ಯೇಕವಾಗಿದ್ದು, ದುಆನಲ್ಲಿ ಪಾಲ್ಗೊಳ್ಳಲು ತಾಕೀತು ಮಾಡಿರುತ್ತಾರೆ.

**ಪ್ರಶ್ನೆ:** ಮಹಿಳೆಯೊಬ್ಬಳು ಪವಿತ್ರ ರಂಝಾನ್‌ನಲ್ಲಿ ಇಹ್‌ತಿಕಾಫ್ ಕುರಿತು ಪ್ರಸ್ತಾಪಿಸಿದರು. ಇಹ್‌ತಿಕಾಫ್ ಮನೆಯಲ್ಲಿ ಮಾಡಬಹುದೇ? ಮತ್ತು ಇಹ್‌ತಿಕಾಫ್ ಮೂರು ದಿನಗಳವರೆಗೆ ಆಗಬಹುದೇ?

ಹುಝೂರ್(ಅಬಿಅ) ತನ್ನ ಪತ್ರ ದಿನಾಂಕ: 9 ಆಗಸ್ಟ್ 2015 ರಲ್ಲಿ ಈ ಸಮಸ್ಯೆಗೆ ಈ ಕೆಳಗಿನ ಉತ್ತರ ನೀಡಿದರು.

**ಉತ್ತರ:** ಎಲ್ಲಿಯವರೆಗೆ ರಂಝಾನ್‌ನಲ್ಲಿ ಅಧಿಕೃತ ನೆಲೆಯ ಇಹ್‌ತಿಕಾಫಿನ ಪ್ರಶ್ನೆ ಇದೆ. ಖುರ್‌ಆನ್ ಹದೀಸುಗಳಿಂದ ಸಾಬೀತಾಗಿದೆ. ಮನೆಯಲ್ಲಿ ಹಾಗೂ ಮೂರು ದಿನಗಳಿಗಾಗಿ ಆಗುವುದಿಲ್ಲ. ಹಝ್ರತ್ ರಸೂಲುಲ್ಲಾಹ್(ಸ) ರವರ ಸುನ್ನತ್‌ನಿಂದ ಸಾಬೀತಾಗಿದೆ. ಹುಝೂರ್(ಸ) ಪವಿತ್ರ ರಂಝಾನ್‌ನಲ್ಲಿ ಕನಿಷ್ಠ ಹತ್ತು ದಿನಗಳಿಗಾಗಿ ಮಸೀದಿಯಲ್ಲಿ ಇಹ್‌ತಿಕಾಫ್ ಮಾಡುತ್ತಿದ್ದರು. ಅಂದ ಹಾಗೆ ಹದೀಸಿನಲ್ಲಿ ಬರುತ್ತದೆ.

ಅನುವಾದ: ಹಝ್ರತ್ ಆಯಿಶಾ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ತನ್ನ ವಫಾತ್ ಆಗುವವರೆಗೆ ರಂಝಾನ್‌ನ ಕೊನೆಯ ಹತ್ತು ದಿನಗಳಲ್ಲಿ ಇಹ್‌ತಿಕಾಫ್ ಮಾಡುತ್ತಿದ್ದರು. (ಸಹೀ ಬುಖಾರಿ, ಕಿತಾಬುಲ್ ಎತಿಕಾಫ್)

ಅದೇ ರೀತಿ ಪವಿತ್ರ ಖುರ್‌ಆನ್‌ನಲ್ಲಿ ರಂಝಾನಿನ ಸಮಸ್ಯೆಗಳ ಬಗ್ಗೆ ವಿವರವಿದ್ದಲ್ಲಿ ಇತಿಕಾಫ್ ಬಗ್ಗೆಯೂ ವಿವರವಿದೆ.

**"ವಲಾ ತುಬಾಶಿರುಹುನ್ನ ವ ಅಂತುಮ್ ಆಕಿಫೂನ ಫಿಲ್ ಮಸಾಜಿದ್"** (ಅಲ್-ಬಖರ-188) ಮೊದಲನೆಯದಾಗಿ ರಂಝಾನ್‌ನಲ್ಲಿ ಪತಿ ಪತ್ನಿಯರಿಗೆ ಸಂಸರ್ಗ ಮಾಡುವ ಅನುಮತಿ ಇಲ್ಲ. ಎರಡನೆಯದಾಗಿ ಇಹ್‌ತಿಕಾಫ್ ಮಸೀದಿಯಲ್ಲೆ ಮಾಡುವ ಆಜ್ಞೆಯಿದೆ.

ಹದೀಸುಗಳಲ್ಲಿ ಇಹ್‌ತಿಕಾಫ್ ಮಸೀದಿಯಲ್ಲಿಯೇ ನಿರ್ವಹಿಸುವ ಉಲ್ಲೇಖಗಳಿವೆ. ಅಂದ ಹಾಗೆ ಹಝ್ರತ್ ಆಯಿಶಾ(ರ) ವರದಿ ಮಾಡುತ್ತಾರೆ. ಅನುವಾದ: ಇಹ್‌ತಿಕಾಫ್ ಕುಳಿತವನು ರೋಗಿಯ ನೋಡಲು ಹೋಗಬಾರದು, ಶವಯಾತ್ರೆಯಲ್ಲಿ ಪಾಲ್ಗೊಳ್ಳಬಾರದು, ತನ್ನ ಪತ್ನಿಯೊಂದಿಗೆ ಸಂಸಾರ ಮಾಡಬಾರದು. ತೀರ ಅಗತ್ಯ ಕಾರಣ ಹೊರತುಪಡಿಸಿ ಮಸೀದಿಯಿಂದ ಹೊರಗೆ ಹೋಗಕೂಡದು. ಉಪವಾಸವಿಲ್ಲದೆ ಇಹ್‌ತಿಕಾಫ್ ಇರ್ವಹಿಸುವುದು ಸರಿಯಲ್ಲ, ಜುಮುಅ ಮಸೀದಿ ಅಲ್ಲದೇ ಬೇರೆ ಸ್ಥಳಗಳಲ್ಲಿ ಇಹ್‌ತಿಕಾಫ್ ಸರಿಯಲ್ಲ.(ಸುನನ್ ಅಬಿ ದಾಊದ್, ಕಿತಾಬುಸ್ಸೌಮ್)

ಅಂದ ಹಾಗೆ ಪವಿತ್ರ ಖುರ್‌ಆನ್ ಮತ್ತು ಹದೀಸುಗಳನ್ವಯ ಪವಿತ್ರ ರಂಝಾನ್‌ನಲ್ಲಿ ಇಹ್‌ತಿಕಾಫ್ ಕನಿಷ್ಠ ಹತ್ತು ದಿನಗಳದ್ದಾಗಿರುತ್ತದೆ ಮತ್ತು ಮಸೀದಿಯಲ್ಲಿಯೇ ಕುಳಿತುಕೊಳ್ಳಬಹುದಾಗಿದೆ.

ಹೌದು ರಂಝಾನ್ ಹೊರತುಪಡಿಸಿದ ಸಾಮಾನ್ಯ ದಿನಗಳಲ್ಲಿ ಪುಣ್ಯ ಪ್ರಾಪ್ತಿಗಾಗಿ ಯಾರಾದರೂ ತಮ್ಮ ಮನೆಯಲ್ಲಿ ಕೆಲ ದಿನಗಳರೆಗೆ ಇಹ್‌ತಿಕಾಫ್ ಮಾಡಬಯಸುವುದಾದರೆ ಅದಕ್ಕೆ ಅನುಮತಿ ಇದೆ. ಆ ಬಗ್ಗೆ ಎಲ್ಲಿಯೂ ನಿಷೇಧ ಕಂಡುಬಂದಿಲ್ಲ. ಅದಲ್ಲದೆ ಕೆಲ ಧಾರ್ಮಿಕ ತತ್ವಜ್ಞಾನಿಗಳು ಸ್ತ್ರೀಯರಿಗೆ ಮನೆಯಲ್ಲಿಯೇ ಇಹ್‌ತಿಕಾಫ್ ಮಾಡುವುದು ಉತ್ತಮ ಎಂದಿದ್ದಾರೆ. ಅಂದ ಹಾಗೆ ಫಿಖಾದ ಪ್ರಸಿದ್ಧ ಗ್ರಂಥವಾದ ಹದಾಯಿನಲ್ಲಿ ಬರೆಯಲಾಗಿದೆ.

ಅಂದರೆ ಸ್ತ್ರೀಯು ತನ್ನ ಮನೆಯಲ್ಲಿಯೇ ನಮಾಝ್ ನಿರ್ವಹಿಸುವ ಸ್ಥಳದಲ್ಲಿ ಇತಿಕಾಫ್ ಮಾಡಬಹುದಾಗಿದೆ.

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಕುರಿತು ಹೇಳುತ್ತಾರೆ. ಮಸೀದಿಯ ಹೊರತು ಇಹ್‌ತಿಕಾಫ್ ಮಾಡಬಹುದು. ಆದರೆ ಮಸೀದಿ ರೀತಿಯ ಪುಣ್ಯ ದೊರೆಯುವುದಿಲ್ಲ. ದಿನಪತ್ರಿಕೆ ಅಲ್-ಫಝ್ಲ್ 6 ಮಾರ್ಚ್ 1996).

**ಪ್ರಶ್ನೆ:** ಗುಲ್ಶನ್ ವಖ್ಫೆ ನೌ ಆಸ್ಟ್ರೇಲಿಯಾ ದಿನಾಂಕ: 12 ಅಕ್ಟೋಬರ್ 2013 ರಲ್ಲಿ ಓರ್ವ ಬಾಲಕಿ ಹುಝೂರ್ ಅನ್ವರ್ (ಅಬಿಅ) ಅವರೊಂದಿಗೆ ಪ್ರಶ್ನೆ ಕೇಳಿದಳು. ಬಾಲಕಿಯರಿಗೆ ಯಾವ ವಯಸ್ಸಿನಲ್ಲಿ ಸ್ಕಾರ್ಫ್ ತೆಗೆದುಕೊಳ್ಳಬೇಕು? ಹುಝೂರ್ ಅನ್ವರ್ ಅದಕ್ಕೆ ಉತ್ತರ ನೀಡುತ್ತಾ ಹೇಳಿದರು.

**ಉತ್ತರ:** ನೀವು ಐದು ವರ್ಷದವರಾದರೆ Leggings ಇಲ್ಲದ, ಅಂದರೆ ಅರ್ಧ ಪ್ರಮಾಣದ ಫ್ರಾಕ್ ಧರಿಸಬಾರದು. ನಿಮ್ಮ ಕಾಲುಗಳು ಮುಚ್ಚಿರಬೇಕು. ಏಕೆಂದರೆ ನಿಧಾನವಾಗಿ ನಮ್ಮ ವೇಷಭೂಷಣ (dress) ಪೂರ್ಣ ಪ್ರಮಾಣದ್ದಿರಬೇಕು ಎಂಬ ಭಾವನೆ ಬರಬೇಕಾಗಿದೆ. Sleeveless ಬಟ್ಟೆ ಧರಿಸಬಾರದು. ಮತ್ತೆ 6, 7 ವರ್ಷದವರಾದರೆ Leggings ಪೈಕಿ ಇನ್ನು ಹೆಚ್ಚಿನ ಜಾಗೃತೆ ವಹಿಸಬೇಕು. ಮತ್ತೆ ನೀವು ಹತ್ತು ವರ್ಷದವರಾದರೆ ಸ್ಕಾರ್ಫ್ ತೆಗೆದುಕೊಳ್ಳುವ ಅಭ್ಯಾಸ ಮಾಡಬೇಕು. ಮತ್ತೆ ಹನ್ನೊಂದು ವರ್ಷದವರಾದರೆ ಪೂರ್ಣರೂಪದಲ್ಲಿ ಸ್ಕಾರ್ಫ್ ತೆಗೆದುಕೊಳ್ಳಬೇಕು. ಸ್ಕಾರ್ಫ್ ತೆಗೆದುಕೊಳ್ಳುವುದರಲ್ಲಿ ಅಡ್ಡಿಯೇನಿದೆ? ಚಳಿಗಾಲದಲ್ಲಿ ಇಲ್ಲೂ ಜನರು ಸ್ಕಾರ್ಫ್ ಹಾಕಿಕೊಳ್ಳುತ್ತಾರೆ. ಚಳಿ, ಆದರೆ ತನ್ನ ಕಿವಿಗಳನ್ನು ಮುಚ್ಚಿಕೊಳ್ಳುವುದಿಲ್ಲವೇ? ಅದು ಸ್ಕಾರ್ಫ್ ಆಗಿದೆ. ಅದೇ ರೀತಿಯ ಸ್ಕಾರ್ಫ್ ತೆಗೆದುಕೊಳ್ಳಿ, ಕೆಲ ಬಾಲಕಿಯರಿರುತ್ತಾರೆ. ಅವರು ಹತ್ತು ವರ್ಷದ ವಯಸ್ಸಿನಲ್ಲೂ ಸಣ್ಣವರಾಗಿಯೇ ಕಾಣುತ್ತಾರೆ, ಮತ್ತು ಕೆಲವರು ಹತ್ತು ವರ್ಷ ವಯಸ್ಸಿನಲ್ಲಿಯೇ ಹನ್ನೆರಡು ವರ್ಷದವರ ಹಾಗೆ ಕಾಣುತ್ತಾರೆ. ಅವರ ಉದ್ದ ಹೆಚ್ಚಾಗಿರುತ್ತದೆ. ಎಲ್ಲಾ ಹುಡುಗಿಯರು ನೋಡಿಕೊಳ್ಳಬೇಕು. ಅವರು ದೊಡ್ಡವರಾಗಿ ಕಂಡರೆ ಸ್ಕಾರ್ಫ್ ತೆಗೆದುಕೊಳ್ಳಬೇಕು. ಸಣ್ಣ ವಯಸ್ಸಿನಲ್ಲಿಯೇ ಸ್ಕಾರ್ಫ್ ತೆಗೆದುಕೊಳ್ಳುವ ಅಭ್ಯಾಸ ಮಾಡಿಕೊಂಡರೆ ಮತ್ತು ನಾಚಿಕೆ ಆಗುವುದಿಲ್ಲ. ಇಲ್ಲವಾದರೆ ವಯಸ್ಸು ಪೂರ್ತಿ ನಾಚಿಕೆ ಪಡುತ್ತಿರಬೇಕಾಗುತ್ತದೆ. ನೀವು ಅಂದುಕೊಳ್ಳಬಹುದು. 12ನೇ ವಯಸ್ಸಿನಲ್ಲಿ, 13ನೇ ವಯಸ್ಸಿನಲ್ಲಿ, ಹದಿನಾಲ್ಕನೆ ವಯಸ್ಸಿನಲ್ಲಿ ಹೋಗಿ ಸ್ಕಾರ್ಫ್

ತೆಗೆದುಕೊಳ್ಳಬಹುದು ಎಂದು, ಮತ್ತೆ ಯೋಚಿಸುತ್ತಿದ್ದರೆ ನಿಮಗೆ ನಾಚಿಕೆ ಬರುವುದು, ಮತ್ತು ಅನಿಸಿಕೊಳ್ಳುವುದು, ಈಗ ಸ್ಕಾರ್ಫ್ ತೆಗೆದುಕೊಂಡರೆ ಹುಡುಗಿಯರು ತಮಾಷೆ ಮಾಡಬಹುದು ಎಂದು. ನಾನು ಸ್ಕಾರ್ಫ್ ತೆಗೆದುಕೊಂಡರೆ ನನ್ನ ಮೇಲೆ ನಗುವರು. ಆದುದರಿಂದ ಒಮ್ಮೊಮ್ಮೆ ಸ್ಕಾರ್ಫ್ ತೆಗೆದುಕೊಳ್ಳುವ ಅಭ್ಯಾಸ ಮಾಡಿಕೊಳ್ಳಬೇಕು. 7,8,9 ವರ್ಷದ ವಯಸ್ಸಿನಲ್ಲಿ ಸ್ಕಾರ್ಫ್ ತೆಗೆದುಕೊಳ್ಳುವ ಅಭ್ಯಾಸ ಪ್ರಾರಂಭಿಸಬೇಕು. ಹುಡುಗಿಯರ ಮುಂದೆಯೂ ತೆಗೆದುಕೊಳ್ಳಬೇಕು. ಆಗ ನಿಮ್ಮಲ್ಲಿ ನಾಚಿಕೆಯ ಭಾವನೆ ಇರದು. ನೀವು ದೊಡ್ಡವರಾಗಿ ಕಾಣುವಾಗ ಪೂರ್ಣ ಪ್ರಮಾಣದ ಸ್ಕಾರ್ಫ್ ತೆಗೆದುಕೊಳ್ಳಬೇಕು. ಸರಿ ಅಲ್ವಾ, ತಿಳಿಯಿತಾ? ನಿಮಗೆ ಇಷ್ಟು ಸಾಕು ಮತ್ತು ದೊಡ್ಡ ಹುಡುಗಿಯರಿಗೆ ಇಷ್ಟು ಸಾಕು. ಪರದೆಯ ನಿಜವಾದ ಉದ್ದೇಶ ಲಜ್ಜೆ ಆಗಿದೆ. ಇದೀಗ ಯೂರೋಪಿಯನ್ ಇದ್ದಾರೆ. ಅಥವಾ Western Influence ಒಳಗೆ ಬರುತ್ತಾರೆ. ಹಳೆಯ ಕಾಲದಲ್ಲಿ ಅವರ ವಸ್ತ್ರಗಳು ಸಹ ಇಲ್ಲಿಯವರೆಗೆ ಇರುತ್ತಿದ್ದವು. (ಆ ಸಂದರ್ಭದಲ್ಲಿ ಹುಝೂರ್ ತನ್ನ ಕೈಗಳ ಪಂಜೆಯತನಕ ಸಂಕೇತಿಸಿ ಹೇಳಿದರು) ಉದ್ದದ ಮ್ಯಾಕ್ಸಿ, ಫ್ರಾಕ್ಸ್ ಇರುತ್ತಿದ್ದವು. ಈಗ ನೋಡಿ ಬೆತ್ತಲೆಯಾಗಿ ತಿರುಗುತ್ತಿದ್ದಾರೆ ಅಲ್ವಾ?

ಪ್ರಶ್ನೆಯಿರುವುದು ಇಲ್ಲಿ, ಪುರುಷರು Well dressed ಅಂದರೆ ಅವರು ಪೂರ್ಣ ಪ್ರಮಾಣದ ಬಟ್ಟೆ ಧರಿಸಿರಬೇಕು. ಕೋಟ್ ಧರಿಸಿರಬೇಕು. ಟೈ ಹಾಕಿರಬೇಕು. ಸ್ತ್ರೀಯರ Well dressed ಅಂದರೆ ಅವರು ಮಿನಿ ಸ್ಕರ್ಟ್ ಧರಿಸಿರಬೇಕು. ಈ ತತ್ವ ನನಗೆ ಅರ್ಥವಾಗಲಿಲ್ಲ.

ಆದುದರಿಂದ ಪುರುಷರಿಗೆ ನೋಡಬೇಡಿ. ಸ್ತ್ರೀಯರು ತನ್ನನ್ನು ತಾನು ಬೆತ್ತಲೆಯಾಗಿಸುತ್ತಿದ್ದಾರೆ. ಸ್ವಯಂ ತನಗೆ ಅಪಮಾನ ಮಾಡಿಕೊಳ್ಳುತ್ತಿದ್ದಾರೆ. ಆದುದರಿಂದ ಅಹ್ಮದಿ ಹುಡುಗಿ, ಅಹ್ಮದಿ ಸ್ತ್ರೀಯ ಗೌರವ ಘನತೆ ತನ್ನ ಲಜ್ಜೆ ಕಾಪಾಡುವುದರಲ್ಲಿಯೇ ಇದೆ. ಏಕೆಂದರೆ ಲಜ್ಜೆಯೇ ನಿಜವಾದ ವಸ್ತುವಾಗಿದೆ. ಲಜ್ಜೆಯೇ ನಿಮ್ಮ ಮೇಲೆ ಇತರರ ದೃಷ್ಟಿ ಬೀಳದಂತೆ ಮಾಡುತ್ತಿದೆ.

**ಪ್ರಶ್ನೆ:** ಆಸ್ಟ್ರೇಲಿಯಾದ ವಾಖಿಫಾತ್ ಸಾವಿನ ಅದೇ ಕಾರ್ಯಕ್ರಮ ಗುಲ್ಶನೆ ವಕ್ಫೆ ನೌ ದಿನಾಂಕ: 12 ಅಕ್ಟೋಬರ್ 2013 ರಲ್ಲಿ ಓರ್ವ ಬಾಲಕಿ ಹುಝೂರ್‌ರ ಸೇವೆಯಲ್ಲಿ ಪ್ರಶ್ನೆ ಮಾಡಿದಳು. ರಂಝಾನಿನಲ್ಲಿ ಆವು ಯಾವ ವಯಸ್ಸಿನಲ್ಲಿ ಉಪವಾಸ ಪ್ರಾರಂಭಿಸಬೇಕು? ಈ ಪ್ರಶ್ನೆ ಉತ್ತರ ನೀಡುತ್ತಾ ಅವರು ಹೇಳಿದರು.

**ಉತ್ತರ:** ನಿಮ್ಮ ಪ್ರಕಾರ ರೂಪದಲ್ಲಿ ಪ್ರೌಢಾವಸ್ಥೆಗೆ ಬಂದಾಗ ನಿಮಗೆ ಉಪವಾಸ ಕಡ್ಡಾಯವಾಗುತ್ತದೆ. ನೀವು ವಿದ್ಯಾರ್ಥಿಯಾಗಿದ್ದರೆ, ನಿಮ್ಮ ಪರೀಕ್ಷೆಗಳು ನಡೆಯುತ್ತಿದ್ದರೆ ಆ ದಿನಗಳಲ್ಲಿ ನಿಮ್ಮ ವಯಸ್ಸು 13, 14, 15 ವರ್ಷಗಳಾಗಿದ್ದರೆ ನೀವು ಉಪವಾಸ ನಿರ್ವಹಿಸುವುದು ಬೇಡ, ನಿಮ್ಮಲ್ಲಿ ಸಹಿಸುವ ಶಕ್ತಿ ಇದ್ದರೆ 15 ವರ್ಷದ ವಯಸ್ಸಿನಲ್ಲಿ ಉಪವಾಸ ಇಡಬಹುದು. ಆದರೆ ಸಾಮಾನ್ಯವಾಗಿ ಉಪವಾಸವು 17, 18 ವರ್ಷಗಳ ಮೇಲೆ ಕಡ್ಡಾಯವಾಗುತ್ತದೆ. ಆನಂತರ ಉಪವಾಸ ಇಡಲೇಬೇಕಾಗಿದೆ. 8, 10 ವರ್ಷದ ವಯಸ್ಸಿನಲ್ಲಿ 3, 4, ಉಪವಾಸಗಳು ಐಚ್ಛಿಕವಾಗಿ ಇರಬಯಸುವುದಾದರೆ ಇರಬಹುದು. ಆದರೆ ಕಡ್ಡಾಯವೇನಲ್ಲ. ನೀವು ಪ್ರೌಢಾವಸ್ಥೆಗೆ ಬಂದಾಗ, ಶಕ್ತಿಬಂದಾಗ ನಿಮಗೆ ಉಪವಾಸ ಕಡ್ಡಾಯವಾಗಿರುವುದು, ಇಲ್ಲಿ (ಆಸ್ಟ್ರೇಲಿಯಾದಲ್ಲಿ ಲೇಖಕರು) ವಿವಿಧ ಋತುಗಳಲ್ಲಿ ಎಷ್ಟು ವ್ಯತ್ಯಾಸವಿರುತ್ತದೆ. Day night ಎಷ್ಟು ಗಂಟೆಯದ್ದಾಗಿರುತ್ತದೆ? ಹೌದು ನೀವು 19 ಗಂಟೆ ಹಸಿವಿನಿಂದ ಇರಲಾರಿರಿ. ಯು.ಕೆ ಯಲ್ಲೂ ಸಹ ಇಂದು. ಹಿಂದೆ ಕಳೆದ ಶೆಕೆಗಾಲದ ನಿಮ್ಮ ಉಪವಾಸ ಸಣ್ಣವಾಗಿದ್ದವು ಮತ್ತು ಅಲ್ಲಿ ದೀರ್ಘವಾಗಿದ್ದವು. 18 ವರೆ ಸ್ಥಳಗಳಲ್ಲೂ 22 ಗಂಟೆಗಳ ಉಪವಾಸವಿರುತ್ತದೆ. ಅಂತೂ ಅಲ್ಲಿ ಸಮಯವನ್ನು Adjust ಮಾಡಬೇಕಾಗುತ್ತದೆ. ಏಕೆಂದರೆ ಅಷ್ಟೊಂದು ದೀರ್ಘ ಸಮಯದ ಉಪವಾಸ ಇರಲಾಗದು. ಆದರೆ ಸಹನೆ ಶಕ್ತಿ ಬರುವುದು ಪ್ರೌಢಾವಸ್ಥೆಗೆ ಬಂದಾಗ, ಕನಿಷ್ಠ 17, 18 ವರ್ಷದವರಾದರೆ ಸರಿ. ಉಪವಾಸ ಮಾಡಬಹುದು. ತಿಳಿಯಿತಾ? ನಿಮ್ಮ ತಂದೆ ತಾಯಿಯರು ಏನು ಹೇಳುತ್ತಾರೆ? ಹತ್ತು ವರ್ಷದಲ್ಲಿ ಕಡ್ಡಾಯವಾಗಿದೆ ಎಂದು ಹೇಳುತ್ತಾರೆಯೇ? ಆದರೆ ಅಭ್ಯಾಸ ಮಾಡಿಕೊಳ್ಳಿ, ಸಣ್ಣ ಮಕ್ಕಳಿಗೆ ಸಹ 2, 3 ಉಪವಾಸ ರಂಝಾನ್‌ನಲ್ಲಿ ಇರಬಹುದಾಗಿದೆ. ಏಕೆಂದರೆ ರಂಝಾನ್ ಬಂದಿದೆ ಎಂದು ಅರಿವಾಗಬೇಕು. ಆದರೆ ಉಪವಾಸ ಇರದಿದ್ದರೂ ಬೆಳಿಗ್ಗೆ ಬೇಗ ಏಳಿರಿ. ತಂದೆ ತಾಯಿಯರ ಜೊತೆ ಸೆಹರಿ ಮಾಡಿರಿ. ನಫಲ್ ನಿರ್ವಹಿಸಿರಿ. ನಮಾಝ್‌ಗಳನ್ನು ವಿಧಿಬದ್ಧವಾಗಿ ನಿರ್ವಹಿಸಿರಿ, ನಿಮ್ಮ ಅಂದರೆ ವಿದ್ಯಾರ್ಥಿಗಳ ಮತ್ತು ಮಕ್ಕಳ ರಂಝಾನ್ ಎಂದರೆ ಏಳಬೇಕು, ಸೆಹರಿ ಉಣ್ಣಬೇಕು, ಅದರ ಮುಂಚೆ ಎರಡು ಅಥವಾ ನಾಲ್ಕು ನಫಲ್ ಅನುಷ್ಠಿಸಬೇಕು, ಮತ್ತೆ ನಮಾಝ್‌ಗಳನ್ನು ವಿಧಿಬದ್ಧವಾಗಿ ನಿರ್ವಹಿಸಬೇಕು, ಪವಿತ್ರ ಖುರ್‌ಆನ್ ಕ್ರಮಬದ್ಧವಾಗಿ ಪಠಿಸಬೇಕು.

**(ಸಂಗ್ರಹ : ಝುಹೀರ ಅಹ್ಮದ್ ಖಾನ್, ಪ್ರೈವೇಟ್ ಸೆಕ್ರೇಟರಿ ಕಚ್ಚೇರಿ ಲಂಡನ್‌ನ ರೆಕಾರ್ಡ್ ಭಾಗ) (ಅಖ್ಬಾರೆ ಅಲ್‌ಫಝುಲ್ ಇಂಟರ್‌ನ್ಯಾಶ್ನಲ್ 27-10-2020)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ನಾವು ಅಂತಹವರನ್ನು ವಿರೋಧಿಸಿದಾಗ, ನಾವು ಹಾಗೆ ಮಾಡಿದ್ದೇವೆ, ಆಕ್ಷೇಪಿಸಿದ್ದೇವೆ. ಅದಕ್ಕೆ ಉತ್ತರಿಸಲಾಗಿಲ್ಲ ಮತ್ತು ನಂತರ ಕೆಲವೊಮ್ಮೆ ಜಾಹೀರಾತು ಹೊರಡಿಸುತ್ತಾರೆ. ಆದರೆ ಅಂತಹ ವಿಷಯಗಳ ಬಗ್ಗೆ ನಾವು ಏನು ಕಾಳಜಿ ವಹಿಸಬಹುದು. ನಾವು ಮಾಡಬೇಕಾದ್ದನ್ನು ನಾವು ಮಾಡಬೇಕು.

ಆದ್ದರಿಂದ ಹಳೆಯ ಖಿಲಾಫತ್ತಿನ ವಿವಾದವನ್ನು ಮರೆತುಬಿಡಿ. ಈಗ ಹೊಸ ಖಿಲಾಫತ್ ಅನ್ನು ತೆಗೆದುಕೊಳ್ಳಿ. ಒಬ್ಬ ಜೀವಂತ ಅಲಿ ನಿಮ್ಮಲ್ಲಿದ್ದಾನೆ, ಆದರೆ ನೀವು ಅದನ್ನು ಬಿಡುತ್ತೀರಿ ಮತ್ತು ಮೃತ ಅಲಿಯನ್ನು ಹುಡುಕಾಡುತ್ತಿದ್ದೀರಿ. **(ಮಲ್ಫೂಝಾತ್, ಸಂಪುಟ-2, ಪುಟ-25, ಸಂಚಿಕೆ 2018 ಖಾದಿಯಾನ್)**

-------------*****-------------

## ಜಲ್ಸ ಸಾಲಾನ ಖಾದಿಯಾನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಈ ಜಲ್ಸದೊಂದಿಗೆ ಅನೇಕ ಅನುಗ್ರಹಗಳು ಅನಿವಾರ್ಯವಾಗಿ ಸೇರಿಕೊಂಡಿರುವುದರಿಂದ ದಾರಿ ಖರ್ಚಿಗೆ ಸಾಮರ್ಥ್ಯವಿರುವ ಪ್ರತಿಯೊಬ್ಬನು ಈ ಜಲ್ಸಕ್ಕೆ ಆಗಮಿಸಬೇಕು. ಚಳಿಗಾಲಕ್ಕೆ ಆವಶ್ಯಕವಾದ ಹಾಸುವ ಮತ್ತು ಹೊದಿಕೆ ಬಟ್ಟೆಗಳನ್ನು ಆವಶ್ಯಕವಾದಷ್ಟು ತರಬೇಕು. ಅಲ್ಲಾಹನ ಮತ್ತು ಅವನ ರಸೂಲರ ಮಾರ್ಗದಲ್ಲಿ ಚಿಕ್ಕಪುಟ್ಟ ಅಡ್ಡಿ ಆತಂಕಗಳನ್ನು ನಿರ್ಲಕ್ಷಿಸಬೇಕು. ಅಲ್ಲಾಹನು ನಿಷ್ಠಾವಂತನಿಗೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ಅನುಗ್ರಹ ನೀಡುತ್ತಾನೆ. ಅವನ ಮಾರ್ಗದಲ್ಲಿ ಪಡುವ ಕಷ್ಟಗಳನ್ನು ವ್ಯರ್ಥಗೊಳಿಸುವುದಿಲ್ಲ. ನಾನು ಪುನರಾವರ್ತಿಸಿ ಬರೆಯುತ್ತೇನೆ ಈ ಜಲ್ಸವನ್ನು ಮಾನವರ ಸಾಮಾನ್ಯ ಜಲ್ಸದ ಹಾಗೆಂದು ಯೋಚಿಸಬೇಡಿರಿ. ಇದು ಸತ್ಯಕ್ಕೆ ಬೆಂಬಲ ನೀಡುವ ಮತ್ತು ಇಸ್ಲಾಮಿನ ಪ್ರಚಾರ ಮಾಡುವ ಅಸ್ತಿಭಾರವನ್ನು ಹೊಂದಿದೆ. ಈ ಜಮಾಅತಿನ ಅಸ್ತಿಭಾರವನ್ನು ಅಲ್ಲಾಹನು ತನ್ನ ಕೈಯಿಂದ ಹಾಕಿದ್ದಾನೆ. ಇದಕ್ಕೋಸ್ಕರ ಅಲ್ಲಾಹನು ಸಮುದಾಯಗಳನ್ನು ಸಿದ್ಧಪಡಿಸಿಟ್ಟಿದ್ದಾನೆ. ಅವರು ಬೇಗನೆ ಇದರಲ್ಲಿ ಬಂದು ಸೇರುವರು. ಯಾಕೆಂದರೆ ಇದು ಸರ್ವಶಕ್ತನಾದವನ ಕೆಲಸವಾಗಿದೆ. ಅವನಿಗೆ ಅಸಾಧ್ಯವಾದುದು ಏನೂ ಇಲ್ಲ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: "ಅಲ್ಲಾಹನಿಗೋಸ್ಕರ ಈ ಜಲ್ಸದಲ್ಲಿ ಭಾಗವಹಿಸಲು ಪ್ರಯಾಣ ಮಾಡುವ ಪ್ರತಿಯೊಬ್ಬನ ಜೊತೆಗೆ ಅಲ್ಲಾಹನು ಜೊತೆಗಾರನಾಗಿರಲಿ. ಅವನಿಗೆ ಬೃಹತ್ತಾದ ಪ್ರತಿಫಲ ನೀಡಲಿ. ಅವರೆಲ್ಲರಿಗೆ ಕಾರುಣ್ಯದೋರಲಿ. ಅವರ ಕಷ್ಟಗಳನ್ನೂ ಆತಂಕಭರಿತ ಸ್ಥಿತಿಯನ್ನೂ ನಿವಾರಿಸಿ ಅವರಿಗೆ ಸೌಲಭ್ಯ ನೀಡುವಂತಾಗಲಿ. ಅವರ ಚಿಂತೆಗಳನ್ನೂ ದುಃಖಗಳನ್ನೂ ದೂರ ಸರಿಸಲಿ. ಅವರಿಗೆ ಪ್ರತಿಯೊಂದು ಕಷ್ಟದಿಂದ ಮುಕ್ತಿಯನ್ನು ದಯಪಾಲಿಸಲಿ. ಅವರ ಇಚ್ಛೆಗಳ ಮಾರ್ಗಗಳನ್ನು ಅವರಿಗೆ ತೆರೆದುಕೊಡಲಿ. ಆಖಿರತ್‌ನಲ್ಲಿ ಅಲ್ಲಾಹನು ಅವರನ್ನು ತಾನು ಅನುಗ್ರಹ ಮತ್ತು ಕಾರುಣ್ಯ ನೀಡಿದ ತನ್ನ ದಾಸರೊಂದಿಗೆ ಎದ್ದೇಳಿಸಲಿ. ಅವರ ಪ್ರಯಾಣದ ಅಂತ್ಯದ ವರೆಗೂ ಅವರ ಬದಲು ಅವರ ಪ್ರತಿನಿಧಿಯಾಗಿರಲಿ. ಓ ಅಲ್ಲಾಹ್, ಕೀರ್ತಿಶಾಲಿಯೂ ವರದಾನ ನೀಡುವವನೂ ಕಾರುಣ್ಯಮಯನೂ ಕಷ್ಟ ಪರಿಹರಿಸುವವನೂ ಆಗಿರುವ ನೀನು ಈ ಎಲ್ಲ ಪ್ರಾರ್ಥನೆಗಳನ್ನೂ ಅಂಗೀಕರಿಸು. ನಮ್ಮ ವಿರೋಧಿಗಳ ವಿರುದ್ಧ ಪ್ರಕಾಶಮಾನವಾದ ದೃಷ್ಟಾಂತಗಳ ಮೂಲಕ ನಮಗೆ ಜಯವನ್ನು ನೀಡು. ಎಲ್ಲಾ ಶಕ್ತಿಸಾಮರ್ಥ್ಯಗಳು ನಿನ್ನಲ್ಲಿ ಮಾತ್ರ ಇವೆ" – ಆಮೀನ್ ಸುಮ್ಮ ಆಮೀನ್.

**(ಮಜ್‌ಮೂಆ ಇಶ್ತಿಹಾರಾತ್ ಸಂಪುಟ-1 ಪುಟ 341-342, ಇಶ್ತಿಹಾರ್ 1892 ಡಿಸೆಂಬರ್ ದಿನಾಂಕ 7)**

**MUSLIM TELEVISION AHMADIYYA INTERNATIONAL**
**www.mta.tv**

## "ದೇಶಪ್ರೇಮವು ಸತ್ಯವಿಶ್ವಾಸದ ಅವಿಭಾಜ್ಯ ಭಾಗವಾಗಿದೆ"

(ಪ್ರವಾದಿ ಮುಹಮ್ಮದ್[ಸ])

ಅಹ್ಮದಿಯಾ ಮುಸ್ಲಿಮ್ ಜಮಾಅತ್ ಭಾರತದ ವತಿಯಿಂದ ಭಾರತದ ಎಲ್ಲಾ ನಾಗರಿಕರಿಗೆ 'ಸ್ವತಂತ್ರ ದಿನಾಚರಣೆ'ಯ ಹಾರ್ದಿಕ ಶುಭಾಶಯಗಳು.

*(ಪುಟ ಸಂಖ್ಯೆ 12ರ ಉಳಿದ ಭಾಗ)*

ನ ಸದಸ್ಯರು ಇಲ್ಲಿದ್ದಾರೆ. ಹೀಗೆ ಕಲಿಯಬೇಕಾದ ವಿಷಯವೇನೆಂದರೆ ಕಾರ್‌ಬನ್ ನಗರದ ಬಹುತೇಕ ನಾಗರಿಕರು ನಿಮ್ಮ ಆಮಂತ್ರನವನ್ನು ಸ್ವೀಕರಿಸಿದ್ದಾರೆ. ಇದು ನೀವು ಕಾರ್‌ಬನ್ ನಗರದ ಭಾಗವಾಗಿಬಿಟ್ಟಿದ್ದೀರಿ ಎಂಬುದಕ್ಕೆ ಸಾಕ್ಷಿಯಾಗಿದೆ. ನೀವು ಸಮ್ಮಿಲಿತಗೊಂಡಿದ್ದೀರಿ. ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ಕಾರ್‌ಬನ್ ನಗರಕ್ಕೆ ಬಂದು 25 ವರ್ಷಗಳಾಗಿವೆ. ಇದೇನು ಸಾಧಾರಣ ಅವಧಿಯಲ್ಲ. ಇದು ನಿಮ್ಮ ನಾಡಾಗಿ ಬಿಟ್ಟಿದೆ.

ಅನಂತರ ಮೇಯರ್ ಸಾಹಿಬ್‌ರವರು ಹೇಳಿದರು. ನಿರ್ಮಾಣ ಕಾರ್ಯದಲ್ಲಿ ಕೇವಲ ನಿಮಗೆ ಅಷ್ಟೇ ತೊಂದರೆ ಆಗಲಿಲ್ಲ. ಬದಲಿಗೆ ನಮಗೂ ಸಹ ನಾನಾ ರೀತಿಯ ಅಡಚಣೆ ಎದುರಿಸಬೇಕಾಗುತ್ತದೆ. ಆದರೆ ಒಂದು ಮಾತು ನಮ್ಮಲ್ಲಿ ಸ್ಪಷ್ಟವಾಗಿತ್ತು. ನಾವು ಎಲ್ಲಿ ಇರುತ್ತೇವೆ ಅಲ್ಲಿ ಒಂದು ಆರಾಧನಾ ಸ್ಥಳವಿರಬೇಕು. ನಿಸ್ಸಂಶಯವಾಗಿಯೂ ತಡವಾಗಿರಬಹುದು. ಆದರೆ ಈ ಕಾರ್ಯ ಪೂರ್ತಿಗೊಂಡಿದೆ. ಕಾರ್‌ಬನ್ ನಗರದಲ್ಲಿ ನಾವು ಪ್ರತಿಯೊಬ್ಬರಿಗೂ ಸ್ವಾಗತಿಸುವೆವು. ಯಾರೂ ನಮ್ಮ ಸಂವಿಧಾನದಂತೆ ಬದುಕಬಯಸುತ್ತಾರೆ ಅವರಿಗೆ ಸ್ವಾಗತವಿದೆ. ನೀವು ವಿಶೇಷ ರೀತಿಯಲ್ಲಿ ಎಲ್ಲಾ ರೀತಿಯ ಕಡೆ ಗಮನ ನೀಡುವವರಾಗಿರಿ. ಅಲ್ಲದೇ ಸಮಾಜದ ಹಿತಾಕಾಂಕ್ಷಿಯಾಗಿದ್ದೀರಿ. ಇತರರು ಇದರಿಂದ ಕಲಿಯುವಂತಿದೆ.

ಅನಂತರ ಮೇಯರ್ ಸಾಹಿಬರು ಹೇಳಿದರು. ನಾನು ಈ ಮತನ್ನು ಸಹ ಒತ್ತಿ ಹೇಳಬಯಸುತ್ತೇನೆ. ಕೇವಲ ಒಬ್ಬರ ಧರ್ಮ ಸಂಬಂಧವಾಗಿ ಅಥವಾ ಯಾವುದೇ ಸಮುದಾಯ ನಿಮಿತ್ತವಾಗಲಿ, ಅವರ ಮೇಲೆ ದೌರ್ಜನ್ಯ ಎಸಗುವುದು ಸಹಿಸಲಾಗದ ಮಾತಾಗಿರುತ್ತವೆ. ತುಂಬಾ ವಿಷಾದದಿಂದ ಹೇಳಬೇಕಾಗುತ್ತದೆ. ಈಗಿನ ಕಾಲದಲ್ಲೂ ಇಂತಹ ಜನರಿರುತ್ತಾರೆ ಎಂದು. ಆದ್ದರಿಂದ ನಾನು ಕಾರ್‌ಬನ್ ನಗರದಲ್ಲಿ ಪ್ರತಿಯೊಬ್ಬರಿಗೂ ಸ್ವಾಗತ ಬಯಸುತ್ತೇನೆ. ಅವರ ಸಂಬಂಧ ಯಾವುದೇ ಧರ್ಮದಿಂದಿರಲಿ.

ಕೊನೆಯಲ್ಲಿ ಮೇಯರ್ ಸಾಹೇಬರು ಹೇಳಿದರು. ನನಗೆ ತುಂಬಾ ಸಂತೋಷದ ವಿಷಯವಾಗಿದೆ. ಅಹ್ಮದಿಯಾ ಮುಸ್ಲಿಂ ಜಮಾಅತಿನ ಸರ್ವೋಚ್ಛ ನೇತಾರರು ನಮ್ಮಲ್ಲಿ ಉಪಸ್ಥಿತರಿದ್ದಾರೆ. ನೀವೆಲ್ಲರೂ ಇಲ್ಲಿ ಸೇರಿದ್ದೀರಿ. ಧನ್ಯವಾದಗಳು

ಅನಂತರ 6 ಗಂಟೆ 33 ನಿಮಿಷಕ್ಕೆ ಹುಝೂರೆ ಅನ್ವರ್[ಅಬಿಅ] ಭಾಷಣ ಪ್ರಾರಂಭಿಸಿದರು.

### ಹುಝೂರೆ ಅನ್ವರ್[ಅಬಿಅ] ರವರ ಸಂಬೋಧನೆ

ತಶಹ್ಹುದ್ ತವೂಝ್ ಮತ್ತು ತಸ್ಮಿಯ ನಂತರ ಹುಝೂರೆ ಅನ್ವರ್[ಅಬಿಅ] ಹೇಳಿದರು:

ಎಲ್ಲಾ ಗೌರವಾನ್ವಿತ ಅತಿಥಿ ಮಹೋದಯರಿಗೆ, ಅಸ್ಸಲಾಮು ಅಲೈಕುಂ ರಹಮತುಲ್ಲಾಹಿ ವ ಬರಕಾರುಹು!

ಅಲ್ಲಾಹನ ಕೃಪೆಯಿದೆ. ಇಷ್ಟೊಂದು ದೀರ್ಘ ಅವಧಿಯ ನಂತರ ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ಈ ನಗರದಲ್ಲಿ ಮಸೀದಿ ನಿರ್ಮಾಣದ ಭಾಗ್ಯ ದೊರೆತಿದೆ. ಆದ್ದರಿಂದ ಈ ನಗರದ ಮೇಯರ್, ಕೌನ್ಸಿಲರ್ಸ್ ಮತ್ತು ನಾಗರಿಕರೆಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಅವರು ಮಸೀದಿ ನಿರ್ಮಾಣ ಕಾರ್ಯದಲ್ಲಿ ನಮಗೆ ನೆರವು ನೀಡಿದರು.

ಈ ಕೃತಜ್ಞತೆ ನಾಮಮಾತ್ರಕ್ಕೆ ಮಾತ್ರವಲ್ಲ. ಬದಲು ಇದು ನಮ್ಮ ಧಾರ್ಮಿಕ ಕರ್ತವ್ಯವಾಗಿದೆ. ಇಸ್ಲಾಮಿನ ಈ ಆದೇಶವಿದೆ. ಇಸ್ಲಾಂ ಧರ್ಮ ಸ್ಥಾಪಕರಾದ ಹಝ್‌ರತ್ ಮುಹಮ್ಮದ್ ಮುಸ್ತಫಾ(ಸ) ಹೇಳಿದರು. ನೀವು ಜನರಿಗೆ ಕೃತಜ್ಞರಾಗಿರುವುದಿಲ್ಲ ಎಂದರೆ ಅಲ್ಲಾಹನಿಗೂ ಕೃತಜ್ಞರಾಗಿರಲು ಸಾಧ್ಯವಿಲ್ಲ. ಆದ್ದರಿಂದ ಒಂದು ಲೆಕ್ಕದಲ್ಲಿ ಇದು ನಮ್ಮ ಧಾರ್ಮಿಕ ಕರ್ತವ್ಯವು ಆಗಿದೆ. ನಾವು ನಿಮಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೆವು. ನೀವು ನಮ್ಮ ಕಾರ್ಯದಲ್ಲಿ ನೆರವಾಗಿದ್ದೀರಿ. ಇಂದು ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ಈ ನಗರದಲ್ಲಿ ಒಂದು ಚಿಕ್ಕದಾದ ಸುಂದರ ಮಸೀದಿ ಲಭ್ಯವಾಗಿದೆ.

ಹುಝೂರೆ ಅನ್ವರ್[ಅಬಿಅ] ಹೇಳಿದರು. ಅಬ್ದುಲ್ಲ ಸಾಹಿಬ್ ಅಮಿರ್ ಜಮಾಅತ್ ಜರ್ಮನಿ ಅವರು ಈ ನಗರದ ಇತಿಹಾಸವನ್ನು ವಿವರಿಸುತ್ತಾ ಹೇಳಿದರು. ಈ ಮಸೀದಿ ನಗರದ ನಡು ಪ್ರದೇಶದಲ್ಲಿದೆ. ಇದು ತುಂಬಾ ಒಳ್ಳೆಯ ಮಾತಾಗಿದೆ. ಲೌಕಿಕ ಮತ್ತು ಭೌತಿಕ ವಸ್ತುಗಳಿಗಾಗಿ ಹೆಚ್ಚಿನ ಸವಲತ್ತುಗಳನ್ನು ಒದಗಿಸಿಕೊಡಲಾಗುತ್ತದೆ. ಅಲ್ಲೇ ಅಲ್ಲಾಹನ ಸ್ಮರಣೆ ಮಾಡಲು ಸಹ ಅನುಕೂಲಕರ ಸ್ಥಳ ಇರಬೇಕಾಗಿದೆ. ಅಲ್ಲಿ ಎಲ್ಲರೂ ಒಟ್ಟುಗೂಡಿ ಏಕದೇವನನ್ನು ಆರಾಧಿಸಬಹುದು. ಮಸೀದಿಯಾಗಲೀ, ಚರ್ಚ್ ಆಗಲಿ ಅಥವಾ ಅನ್ಯ ಧರ್ಮದ ಆರಾಧನ ಸ್ಥಳವಾಗಿರಲಿ, ಇವರೆಲ್ಲರೂ ಒಟ್ಟುಗೂಡುವಾಗ ತಿಳಿದುಬರುವುದು, ಧರ್ಮವು ಪರಸ್ಪರ ಸೇರಿ ಒಟ್ಟುಗೂಡುವ, ಮತ್ತು ಪರಸ್ಪರ ಸಹಕಾರ ನೀಡುವ ಶಿಕ್ಷಣ ಕೊಡುತ್ತದೆ. ಯಾವ ಧರ್ಮವು ಅಥವ ಯಾವ ಧರ್ಮದ ಸ್ಥಾಪಕರು ಆಗಲಿ ಉಗ್ರವಾದದ ಶಿಕ್ಷಣ ನೀಡುವುದಿಲ್ಲ. ಹಿಂಸಿಸುವ ಶಿಕ್ಷಣ ನೀಡುವುದಿಲ್ಲ. ಎಲ್ಲಾ ಪ್ರವಾದಿಗಳು ಅವರವರ ವಿಶ್ವಾಸ ಪ್ರಕಾರ ಅವರು ದೇವನ ಕಡೆ ಬಂದವರಾದರೆ ದೇವರು ಅವರನ್ನು ಆರಾಧಿಸಲು, ಒಬ್ಬರು ಮತ್ತೊಬ್ಬರ ಹಕ್ಕುಗಳನ್ನು ಪಾಲಿಸಲು ಗಮನ ನೀಡಿರುತ್ತಾನೆ. ಶಾಂತಿಮತ್ತು ಸೌಹಾರ್ದತೆಯ ಶಿಕ್ಷಣ ನೀಡಿರುತ್ತಾನೆ. ಆದ್ದರಿಂದ ಈ ನಿಟ್ಟಿನಲ್ಲಿ ಇದೊಂದು ಒಳ್ಳೆಯ ಮಾತಾಗಿದೆ. ನಮಗೆ ಇಂಥದೊಂದು ಜಾಗದಲ್ಲಿ ಮಸೀದಿ ದೊರೆತಿದೆ. ಅದು ನಡು ನಗರದಲ್ಲಿದೆ, ಹೀಗೆ ಎಲ್ಲರ ನಡುವಿನಲ್ಲಿದ್ದು ನೆರೆಹೊರೆಯವರಿಗೆ ಇಸ್ಲಾಮಿನ ಸುಂದರವಾದ ಶಿಕ್ಷಣದ ಬಗ್ಗೆ ಮಾಹಿತಿ ನೀಡಬಹುದು, ತಪ್ಪು ಧಾರಣೆಗಳನ್ನು ಹೋಗಲಾಡಿಸಬಹುದು. ಏಕೆಂದರೆ ಈಗಿನ ಮುಸಲ್ಮಾನರು ಇಸ್ಲಾಮಿನ ಬಗ್ಗೆ ಬಹಳಷ್ಟು ತಪ್ಪು ಧಾರಣೆಗಳನ್ನು ಹುಟ್ಟು ಹಾಕಿದ್ದಾರೆ ಮತ್ತು ಬಹುಸಂಖ್ಯೆಯಲ್ಲಿ ಜನರು ಅದನ್ನೇ ನಂಬಿಕೊಂಡಿದ್ದಾರೆ. ಅದನ್ನು ನಾವು ಹೊಗಲಾಡಿಸುವೆವು ಮತ್ತು ಪವಿತ್ರ ಖುರ್‌ಆನ್ ಹಾಗೂ ಹಝುರತ್ ಮುಹ್ಮದ್ (ಸ) ರವರ ನಡವಳಿಕೆ ಮತ್ತು ಕೃತಿಯಿಂದ ಸಾಬೀತುಪಡಿಸುವೆವು. ಇಸ್ಲಾಮಿನ ನಿಜವಾದ ಶಿಕ್ಷಣ ಶಾಂತಿ, ಪ್ರೇಮ ಮತ್ತು ಸೌಹಾರ್ಧತೆಯಾಗಿದೆ.

**(ಮುಂದುವರಿಯುವುದು)**

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

### ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು

ಸಯ್ಯದನಾ ಹಝ್‌ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27ನೇ ಅಕ್ಟೋಬರ್ 2024 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

### *129 ನೇ ಜಲ್ಸಾ ಸಾಲಾನ ಖಾದಿಯಾನ್ 27, 28, 29 ಡಿಸೆಂಬರ್ 2024ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

**"ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವಾಗಿದೆ. (ಎಂದರೆ ಧಾನಧರ್ಮ ಕೊಡುವವನು ಅದನ್ನು ಪಡೆದುಕೊಳ್ಳುವವನಿಗಿಂತ ಉತ್ತಮವಾಗಿದ್ದಾನೆ)"**
(ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

**"ಯಾರು ಜನರಿಗೆ ಕೃತಜ್ಞತೆ ಸಲ್ಲಿಸುವುದಿಲ್ಲವೋ ಅವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸುವುದಿಲ್ಲ."**
(ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.05, Thursday, 15 August 2024, Issue No. 33

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)


# ಸೈಯಿದುನಾ ಹಝ್ರ್‌ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ–32ರ ಉಳಿದ ಭಾಗ ಮುಂದುವರಿಸಲಾಗಿದೆ)*

ಆನಂತರ ಅವರು ಹೇಳಿದರು. ಧಾರ್ಮಿಕ ಸ್ವಾತಂತ್ರ್ಯವು ಜರ್ಮನಿ ಸಂವಿಧಾನದ ಒಂದು ಮೂಲಭಾಗವಾಗಿದೆ. ಆದರೆ ನಾವು ವಿವಿಧ ದೇಶಗಳ ಮೇಲೆ ದೃಷ್ಟಿ ಹಾಯಿಸಿದರೆ ತಿಳಿದುಬರುತ್ತದೆ. ಈ ರೀತಿಯ ಹಕ್ಕುಗಳು ಪ್ರತಿಯೊಬ್ಬರಿಗೂ ದೊರೆಯುವುದಿಲ್ಲ. ಜನರಿಗೆ ಅವರ ಧರ್ಮ ನಂಬಿಕೆ ಸಲುವಾಗಿ ದೌರ್ಜನ್ಯಗಳಿಗೆ ತುತ್ತಾಗಬೇಕಾಗುತ್ತದೆ. ವಿಷಾದಪೂರ್ವಕ ಹೇಳಬೇಕಾಗುತ್ತದೆ. ಅಹ್ಮದಿ ಮುಸಲ್ಮಾನರ ಮೇಲೂ ಈ ರೀತಿಯ ಅತ್ಯಾಚಾರಗಳು ಮಾಡುತ್ತಾರೆ. ಹಲವು ದೇಶಗಳಲ್ಲಿ ಉದಾಹರಣೆಗೆ ಪಾಕಿಸ್ತಾನ ಅಥವಾ ಬರ್‌ಕೇನಫಾಸುವಿನಲ್ಲಿ ನಿಮ್ಮ ಜನರ ಮೇಲೆ ಅತ್ಯಾಚಾರ ಮಾಡಲಾಗುತ್ತದೆ. ಧಾರ್ಮಿಕ ನಂಬಿಕೆಯು ಮೇಲೆಗೆ ಸೆರೆ ಹಿಡಿಯಲಾಗುತ್ತದೆ. ನಿಮ್ಮ ಮಸೀದಿಗಳನ್ನು ಸ್ಮಶಾನಗಳನ್ನು ಕೆಡವಿ ಹಾಕುತ್ತಾರೆ. ನಿಮಗೆ ಶಾಂತಿಯಿಂದರಲು ಸಾಧ್ಯವಿಲ್ಲ. ನಿಮ್ಮ ಜೀವಗಳಿಗೆ ಅಪಾಯವಿದೆ. ನಾನು ಹೇಳಬಯುಸುವೇನೆಂದರೆ ಇಂತಹ ಘಟನೆಗಳ ಪ್ರಚಾರವಾಗಬೇಕು. ಅದರಿಂದ ಲೋಕವು ತಿಳಿಯುವಂತಾಗುತ್ತದೆ. ಆಗ ಎಲ್ಲಾ ಪ್ರಜಾಸತ್ತಾತ್ಮಕ ದೇಶಗಳ ಕರ್ತವ್ಯವಾಗುತ್ತದೆ. ನಿಮಗೆ ಸಹಕರಿಸಬೇಕು. ನಿಜವಾಗಿ ಹೇಳಬೇಕಾದರೆ ಅಲ್ಪಸಂಖ್ಯಾತರ ರಕ್ಷಣೆಯಿಂದಲೇ ಶಾಂತಿ ಸ್ಥಾಪನೆ ಸಾಧ್ಯ. ಪ್ರತಿಯೊಬ್ಬರಿಂದಾಗಿ ಇಂತಹ ಶಾಂತಿಯುತ ವಾತಾವರಣ ನಿರ್ಮಿಸಿದಾಗ ಮಾತ್ರ ಶಾಂತಿ ಸ್ಥಾಪನೆ ಸಾಧ್ಯವಾಗುತ್ತದೆ.

ಅನಂತರ ಅವರು ಹೇಳಿದರು. ಕೆಲವು ತಿಂಗಳ ಹಿಂದೆ ನನಗೆ Nidda ನಗರದಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತಿನ ಜೊತೆ ಶತಮಾನೋತ್ಸವ ಆಚರಿಸುವ ಸಂದರ್ಭ ಒದಗಿ ಬಂದಿತ್ತು. ಆದರೆ ನಮ್ಮ ಬಹಳಷ್ಟು ನಾಗರಿಕರಿಗೆ ಗೊತ್ತೇ ಇಲ್ಲ. ನೀವು ಇಷ್ಟೊಂದು ದೀರ್ಘ ಅತಿಥಿಯಿಂದ ನಮ್ಮ ನಡುವೆ ಇರುವಿರಿ ಎಂದು. ಆ ಸಮದರ್ಭದಲ್ಲಿ ನನಗೆ ಅವಕಾಶ ಲಭಿಸಿತ್ತು. ಸ್ವಯಂ ನಾನು ನಿಮ್ಮ ಧ್ಯೇಯವಾಕ್ಯವಾದ "Love for All Hatred for None" ಗೆ ಸಾಕ್ಷಿಯಾಗಿದೆ. ಇದು ಕೇವಲ ಪದಗಳಲ್ಲ. ಬದಲು ನೀವು ಹಾಗೆಯೇ ನಡೆದುಕೊಳ್ಳುವವರಾಗಿದ್ದೀರಿ ಎಂದು. ನೀವು ಯಾವುದಕ್ಕೂ ಬಚ್ಚಿಡುವುದಿಲ್ಲ, ಜರ್ಮನಿಯಲ್ಲಿ ನೀವು ಸಕ್ರಿಯರಾಗಿದ್ದೀರಿ, ಎಲ್ಲರೊಡನೆಯೂ ಸಂಬಂಧವಿರಿಸಿಕೊಳ್ಳುತ್ತೀರಿ. ನನ್ನ ಬಯಕೆ ಏನೆಂದರೆ ನೀವು ಮಸ್ಜಿದ್ ಸಾದಿಖ್‌ನಲ್ಲಿ ಹರ್ಷಿತರಾಗಿರಿ ಮತ್ತು ಶಾಂತಿ ಕಾಪಾಡುತ್ತೀರಿ. ಧನ್ಯವಾದಗಳು.

ಅನಂತರ ರಾಜ್ಯ ಸಂಸತ್ ಸದಸ್ಯರು Tobias utter ನಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು. ಅವರು ಮೊಟ್ಟ ಮೊದಲಾಗಿ ಹುಝೂರರ ಸೇವೆಯಲ್ಲಿ ಸಲಾಂ ಹೇಳಿದರು. ಮತ್ತು ಸ್ವಾಗತ ಕೋರಿದರು. ಅನಂತರ ಎಲ್ಲಾ ಉಪಸ್ಥಿತರಿಗೆ ಸ್ವಾಗತ ಕೋರಿದರು.

ಅನಂತರ ಅವರು ಹೇಳಿದರು. ನನಗೆ ಎರಡನೆಯ ಸಲ ಈ ಸಂದರ್ಭದಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತ್ ಸದಸ್ಯರೊಂದಿಗೆ ಸಂಬೋಧಿಸುವ ಅವಕಾಶ ದೊರೆಯುತ್ತದೆ. ರಾಜ್ಯ ಸಂಸತ್ ಸದಸ್ಯ ನೆಲೆಯಲ್ಲಿ ನಿಮಗೆಲ್ಲರಿಗೂ ಶುಭವನ್ನು ಕೋರುತ್ತೇನೆ.

ಮತ್ತು ಅವರು ಹೇಳಿದರು. ಅಹ್ಮದಿಯಾ ಮುಸ್ಲಿಂ ಜಮಾಅತ್ Karben ಅನ್ನು ಇಂದು ಮಸೀದಿಯ ಉದ್ಘಾಟನೆಯ ಅವಕಾಶ ದೊರೆಯುತ್ತಿದೆ. ಇದು ಜರ್ಮನಿಯಲ್ಲಿ ಪ್ರತಿಯೊಬ್ಬರಿಗೂ ಧಾರ್ಮಿಕ ಸ್ವಾತಂತ್ರ್ಯ ಇದೇ ಎಂಬುದಕ್ಕೆ ಸಾಕ್ಷಿಯಾಗಿದೆ. ಈ ಅವಕಾಶ ಎಲ್ಲಾ ಕಡೆ ಎಲ್ಲರಿಗೂ ಲಭ್ಯವಿಲ್ಲ. ನಿಶ್ಚಿತವಾಗಿಯೂ ನಿಮಗೆ ಅನುಭವವಾಗಿರಬೇಕು. ಜರ್ಮನಿಯಲ್ಲಿ ನಿರ್ಮಾಣ ಕಾರ್ಯಗಳ ಕಾನೂನುಗಳು ಎಷ್ಟು ಕಠಿಣಕರವಾಗಿದೆ ಎಂದು. ಆದರೂ ನೀವು ಮಸೀದಿಯನ್ನು ಕಟ್ಟಿಕೊಂಡಿದ್ದೀರಿ. ಮಸೀದಿಯ ಒಂದು ಆರಾಧನಾ ಸ್ಥಳವಾಗಿದೆ. ಇಲ್ಲಿ ಜನರು ಪರಸ್ಪರ ಭೇಟಿಯಾಗುತ್ತಾರೆ ಮತ್ತು ಶಾಂತಿ ನೆಲೆಸುತ್ತಾರೆ. ನನಗೆ ಯಾವಾಗಲೂ ತುಂಬಾ ಸಂತೋಷವಾಗುತ್ತದೆ. ಅಹ್ಮದಿಯಾ ಜಮಾಅತ್ ಕೇವಲ ತಮ್ಮ ಬಗ್ಗೆ ಚಿಂತಿಸುವುದಿಲ್ಲ. ಬದಲು ಅಹ್ಮದಿಯಾ ಮುಸ್ಲಿಂ ಜಮಾಅತ್ ಮಾನವಿಯತೆಯ ಸೇವೆಯೂ ಸಹ ಒಂದು ಧಾರ್ಮಿಕ ಅಂಗ ಎಂದು ಪರಿಗಿಸುತ್ತದೆ. His Holiness ಅವರು ಸೋಮವಾರದಂದು ಅದನ್ನು ಸ್ಪಷ್ಟಪಸಿಸಿದರು. ನೆರೆಹೊರೆಯವರ ಸೇವೆ ಧಾರ್ಮಿಕ ಕರ್ತವ್ಯವಾಗಿದೆ ಎಂದು. ನನಗೆ ಎಲ್ಲಾ ಕಡೆ ಅಹ್ಮದಿ ಸಮಾಜದ ಜನರು ಸಕ್ರಿಯವಾಗಿ ಕಂಡುಬರುತ್ತಾರೆ.

ಮತ್ತು ಅವರು ಪಾಕಿಸ್ತಾನದಲ್ಲಿ ಅಹ್ಮದಿಯರ ಮತ್ತು ಕ್ರಿಸ್ತರ ವಿರೋಧ ಮತ್ತು ಅವರ ಮೇಲೆ ನಡೆಯುವ ಅತ್ಯಾಚಾರಗಳ ಬಗ್ಗೆ ವಿವರಿಸುತ್ತಾ ಹೇಳಿದರು. ಇಂತಹ ಜನರು ಧರ್ಮದ ಹೆಸರನ್ನು ದುರುಪಯೊಗಪಡಿಸಿಕೊಳ್ಳುತ್ತಾರೆ. ಏಕೆಂದರೆ ಆ ಮೂಲಕ ಎಲ್ಲ ಅಧರ್ಮ ಚಟುವಟಿಕೆಗಳು ನಡೆಸಬಹುದು ಎಂದು ನಿಜವಾಗಿ ಹೇಳಬೇಕಾದರೆ ಅವರಿಗೆ ಧರ್ಮದ ನಿಮಿತ್ತ ಯಾವ ಸಂಬಂಧವು ಇರುವುದಿಲ್ಲ. ಆದರೆ ಇಂತಹ ಘೋರ ಅಂಧಕಾರದ ಸಮಯದಲ್ಲಿ ಅಲ್ಲಹನ (ದೇವನ) ಪ್ರಕಾಶದ ಅವಶ್ಯಕತೆ ಇರುತ್ತದೆ. ಪ್ರೀತಿ ಮತ್ತು ಶಾಂತಿಯ ಅವಶ್ಯಕತೆಯಿರುತ್ತದೆ. ಜನರ ವಿರೋಧಾತ್ಮಕ ಘೋಷಣೆಗಳಿಂದ ಹೆದರಬಾರದು, ಇಂತಹ ಜನರ ಇಂದು ಅಗತ್ಯವಿದೆ. ಖಲಿಫತುಲ್ ಮಸೀಹ್ ತಮ್ಮ ವಿವಿಧ ಭೇಟಿ ಕಾರ್ಯಕ್ರಮಗಳಲ್ಲಿ ಮತ್ತು ವಿವಿಧ ಸ್ಥಳಗಳ ಸಂಬೋಧನೆಗಳಲ್ಲಿ ಶಾಂತಿಯತ್ತ ಗಮನ ಸೆಳೆದಿದ್ದಾರೆ. ಅವರ ಗ್ರಂಥ Die weltkmiese und ten weg zum Frieden ಯಿಂದ ಸ್ಪಷ್ಟವಾಗುತ್ತದೆ.

ಕೊನೆಯಲ್ಲಿ ಅವರು ಹೇಳಿದರು. ಖಲೀಫತುಲ್ ಮಸೀಹ್ ಮತ್ತೊಮ್ಮೆ ಇಲ್ಲಿ ಆಗಮಿಸಿದ್ದು ನಮಗೆ ತುಂಬಾ ಗೌರವದ ವಿಷಯವಾಗಿದೆ. ಅವರು ತಮ್ಮ ಆಗಮನದಿಂದ ಮಸೀದಿಯ ಉದ್ಘಾಟನೆಯನ್ನು ವಿಶಿಷ್ಟಗೊಳಿಸುವಂತಾಯಿತು ಇದು ಅಲ್ಲಾಹನ ಗೃಹವಾಗಿದೆ. ಯಾವಾಗಲೂ ಸಮಾತನೆಯ ಮನೆಯಾಗಿರಲಿ, ಇಲ್ಲಿ ಜನರಿಗೆ ಸಹಾಯ ದೊರೆಯಲಿ, ಒಬ್ಬರು ಮತ್ತೊಬ್ಬರಿಗೆ ನೆರವು ನೀಡುವ ಗುಣಕ್ಕೆ ಪ್ರೇರಣೆ ದೊರೆಯಲಿ, ಹೀಗೆ ಅಲ್ಲಾಹನ ಪ್ರೀತಿ ನಮ್ಮಲ್ಲಿ ಪ್ರಕಟಗೊಳ್ಳಲಿ.

ಅನಂತರ ಕಾರ್‌ಬನ್ ನಗರದ ಮೇಯರ್ Guido Rahn ಸಾಹಿಬ್ ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸುತ್ತಾ ಹೇಳಿದರು. ನಾನು ಹುಝೂರರಿಗೆ ಸುಸ್ವಾಗತವನ್ನು ಕೋರುತ್ತೇನೆ. ಅದೇ ರೀತಿ ಎಲ್ಲಾ ಸಭಿಕರಿಗೂ ಸಲಾಂ ಹೇಳುತ್ತೇವೆ. ನಮಗೆ ಇದು ಬಹಳ ಗೌರವದ ವಿಷಯವಾಗಿದೆ. ಅಹ್ಮದಿಯಾ ಜಮಾಅತಿನ ಸರ್ವೋಚ್ಚ ನೇತಾರರು 2014 ರ ನಂತರ ಇದೀಗ ಎರಡನೆಯ ಬಾರಿಗೆ ನಮ್ಮ ನಗರ ಕಾರ್‌ಬನ್‌ಗೆ ಆಗಮಿಸಿದ್ದಾರೆ. ಇಂದಿನ ಈ ಕಾರ್ಯಕ್ರಮ Karben ನಗರವಾಸಿಗಳಿಗೆ ತುಂಬಾ ಪ್ರಾಮುಖ್ಯತೆಯ ವಿಷಯವಾಗಿದೆ.

ನಂತರ ಮೇಯರ್ ಸಾಹಿಬ್ ಹೇಳಿದರು. ಒಬ್ಬ ಮೇಯರ್ ಆದ ನೆಲೆಯಲ್ಲಿ ನನಗೆ ತುಂಬಾ ಸಂತೋಷವಾಗುತ್ತದೆ. ಏಕೆಂದರೆ ಈ ಸಭಾಂಗಣದಲ್ಲಿ ಎತ್ತ ದೃಷ್ಟಿ ಬೀರಿದರೂ ನನಗೆ ನೋಡಲು ಸಿಗುತ್ತದೆ. ಈ ಕಾರ್ಯಕ್ರಮ ಕೇವಲ ಅಹ್ಮದಿ ಸದಸ್ಯರ ಕಾರ್ಯಕ್ರಮವಲ್ಲ. ಬದಲು ನೀವು ನಿಜವಾದ ರೂಪದಲ್ಲಿ ಕಾರ್‌ಬನ್‌ನ ಭಾಗವಾಗಿ ಬಿಟ್ಟಿದ್ದೀರಿ, ಏಕೆಂದರೆ ಇಲ್ಲಿ ಎಲ್ಲಾ ವರ್ಗದ ಜನರು ಪಾಲ್ಗೊಂಡಿದ್ದಾರೆ, ನೀವು ಸುಮಾರು ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಕರೆದಿದ್ದೀರಿ. ಪೋಲೀಸರ ಪ್ರತಿನಿಧಿಗಳು ಇಲ್ಲಿದ್ದಾರೆ, ಅಗ್ನಿಶಾಮಕದವರು ಇಲ್ಲಿದ್ದಾರೆ. ಲೋಕಲ್ Sports club

*(ಪುಟ–11ರಲ್ಲಿ ಮುಂದುವರಿಸಲಾಗಿದೆ)*


**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**


Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.